Downloaded from www.edutubekannada.com

# ಟಿಇಟಿ-2022 ವಿಶೇಷ
# ಶೈಕ್ಷಣಿಕ ಮನೋವಿಜ್ಞಾನದ ಸೂಪರ್ ಮಾಹಿತಿ
## Edutube Kannada Exclusive Notes

**ಮುಂಬರುವ ಟಿಇಟಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳು ಶೈಕ್ಷಣಿಕ ಮನೋವಿಜ್ಞಾನಕ್ಕೆ ಸಂಬಂಧಪಟ್ಟಂತೆ ಇಷ್ಟು ಓದಿಕೊಂಡ್ರೆ ಸಾಕು..!!**

## ಮನೋವಿಜ್ಞಾನ ಮತ್ತು ಶೈಕ್ಷಣಿಕ ಮನೋವಿಜ್ಞಾನ

- ಮನೋವಿಜ್ಞಾನ (Psychology) ಎಂಬ ಪದವು ಗ್ರೀಕ್ ಭಾಷೆಯ Psyche ಮತ್ತು Logos ಎಂಬ ಪದದಿಂದ ಬಂದಿದೆ. Psyche ಎಂದರೆ ಆತ್ಮ Logos ಎಂದರೆ ಅಧ್ಯಯನ.
- ಶಬ್ದೋತ್ಪತ್ತಿಯ ಪ್ರಕಾರ ಮನೋವಿಜ್ಞಾನ ಎಂದರೆ – 'ಆತ್ಮದ ಅಧ್ಯಯನ'. ಸದ್ಯ ಮನೋವಿಜ್ಞಾನ ವರ್ತನೆಯ ಅಧ್ಯಯನವಾಗಿದೆ.
- 1879 ರಲ್ಲಿ ವಿಲ್‌ಹೆಲ್ಮ್‌ವೂಂಟ್ ರವರು ಜರ್ಮನಿಯ ಲಿಪ್‌ಜಿಗ್ ನಲ್ಲಿ ಮೊಟ್ಟಮೊದಲು ಮನೋವಿಜ್ಞಾನದ ಪ್ರಯೋಗಶಾಲೆಯನ್ನು ಪ್ರಾರಂಭಿಸಿದರು.
- ಮನೋವಿಜ್ಞಾನದ ಮೊದಲ ಕೃತಿ: "ಮನೋವಿಜ್ಞಾನದ ತತ್ವಗಳು" ಇದನ್ನು ಬರೆದವರು ವಿಲಿಯಂ ಜೇಮ್ಸ್ (1890).
- 1914 ರಲ್ಲಿ ಜೆ. ಬಿ. ವ್ಯಾಟ್ಸನ್ 'ವರ್ತನಾವಾದ' ವನ್ನು ಪ್ರತಿಪಾದಿಸಿದರು.
- ಮನೋವಿಜ್ಞಾನ ಮೊದಲು ಆತ್ಮವನ್ನು ಕಳೆದುಕೊಂಡಿತು, ನಂತರ ಮನಸ್ಸನ್ನು ಕಳೆದುಕೊಂಡಿತು, ಅನಂತರ ಪ್ರಜ್ಞೆಯನ್ನು ಕಳೆದುಕೊಂಡಿತು, ಸದ್ಯ ಮನೋವಿಜ್ಞಾನವು ವರ್ತನೆಯ ಅಧ್ಯಯನವಾಗಿದೆ.
- ಮನೋವಿಜ್ಞಾನವನ್ನು ಪ್ರಜ್ಞೆಯ ಅಧ್ಯಯನ ಎಂದವರು ವಿಲ್ ಹೆಲ್ಮ್‌ವೂಂಟ್.
- ಮನೋವಿಜ್ಞಾನವನ್ನು ವರ್ತನೆಯ ಅಧ್ಯಯನ ಎಂದು ಕರೆದವರು- ಜೆ. ಬಿ. ವ್ಯಾಟ್ಸನ್.
- ಎಲ್ಲ ಆಧುನಿಕ ಮನೋವಿಜ್ಞಾನಿಗಳನ್ನು 'ವರ್ತನಾವಾದಿಗಳು' ಎಂದು ಕರೆಯಲಾಗುತ್ತದೆ.
- ಮನೋವಿಜ್ಞಾನವು ಸ್ವತಂತ್ರವಾಗಿ ಬೆಳೆದು ನಿಲ್ಲುವಲ್ಲಿ ಅಮೇರಿಕಾದ ಮನೋವಿಜ್ಞಾನಿಯಾದ ವಿಲಿಯಂ ಜೇಮ್ಸ್ ಪಾತ್ರ ಬಹುಮುಖ್ಯ. ಹೀಗಾಗಿ ವಿಲಿಯಂ ಜೇಮ್ಸ್ ಅವರನ್ನು 'ಆಧುನಿಕ ಅಮೇರಿಕನ್ ಮನೋವಿಜ್ಞಾನದ ಪಿತಾಮಹ' ಎಮದು ಕರೆಯಲಾಗುತ್ತದೆ.
- ಶೈಕ್ಷಣಿಕ ಮನೋವಿಜ್ಞಾನವು ಮನೋವಿಜ್ಞಾನದ ಅನ್ವಯಿಕ ಶಾಖೆಯಾಗಿದೆ.
- ಮನೋವಿಜ್ಞಾನದ ರಚನಾ ಪಂಥದ ಪ್ರತಿಪಾದಕರು – ವಿಲ್ ಹೆಲ್ಮ್‌ವೂಂಟ್, ಇ. ಬಿ. ಟಿಚ್ನರ್.

Telegram: https://t.me/edutubekannada

Downloaded from www.edutubekannada.com

- ರಚನಾವಾದಿಗಳ ಪ್ರಕಾರ ಮನೋವಿಜ್ಞಾನವು 'ಪ್ರಜ್ಞೆಯ ವಿಶ್ಲೇಷಣಾತ್ಮಕ ಅಧ್ಯಯನವಾಗಿದೆ.'
- ರಚನಾವಾದಿಗಳ ಪ್ರಕಾರ ಪ್ರಜ್ಞೆಯನ್ನು ಅಧ್ಯಯನ ಮಾಡಲು ಸೂಕ್ತ ವಿಧಾನವೆಂದರೆ 'ಅಂತರಾವಲೋಕನ'
- ಕಾರ್ಯವಾದದ ಪ್ರತಿಪಾದಕರು – ವಿಲಿಯಂ ಜೇಮ್ಸ್, ಜಾನ್‌ಡ್ಯೂಯಿ, ಜೇಮ್ಸ್ ರೋಣಾಲ್ಡ್.
- ಕಾರ್ಯವಾದವು ಪ್ರಜ್ಞೆಯ ರಚನೆಯ ಬದಲಾಗಿ ಕಾರ್ಯಕ್ಕೆ ಹೆಚ್ಚು ಒತ್ತು ನೀಡಿತು.
- ವರ್ತನಾವಾದದ ಪ್ರತಿಪಾದಕ – ಜೆ. ಬಿ. ವ್ಯಾಟ್ಸನ್.
- ಗೆಸ್ಟಾಲ್ಟ್ ವಾದದ ಪ್ರತಿಪಾದಕ – ಮ್ಯಾಕ್ಸ್ ವರ್ಧಮೀರ್, ಕೋಹ್ಲರ್, ಕೋಫ್ಕಾ, ಕರ್ಟ್ ಲೆವಿನ್.
- ಮನೋವಿಶ್ಲೇಷಣಾ ವಾದದ ಪ್ರತಿಪಾದಕ - ಸಿಗ್ಮಂಡ್ ಫ್ರಾಯ್ಡ್, ಕಾರ್ಲ್ ಯೂಂಗ್
- ಸಿಗ್ಮಂಡ್ ಫ್ರಾಯ್ಡ್‌ನನ್ನು ಮನೋವಿಜ್ಞಾನದ ಪಿತಾಮಹ ಎಂದು ಕರೆಯಲಾಗಿದೆ.
- ಥಾರ್ನ್‌ಡೈಕ್ ಅವರನ್ನು ಶೈಕ್ಷಣಿಕ ಮನೋವಿಜ್ಞಾನದ ಪಿತಾಮಹ ಎನ್ನಲಾಗಿದೆ.
- ಮಾನವೀಯವಾದದ ಪ್ರತಿಪಾದಕ – ಅಬ್ರಹಾಂ ಮಾಸ್ಲೋ.
- ಅಂತರಾವಲೋಕನ ಎಂದರೆ 'ತನ್ನೊಳಗೆ ತಾನೇ ಇಣುಕಿ ವೀಕ್ಷಿಸುವುದು.
- ಅಂತರಾವಲೋಕನ ವಿಧಾನದ ಜನಕ – ಇ. ಬಿ. ಟಿಚ್ನರ್.
- ಮನೋವಿಜ್ಞಾನದ ವಿಧಾನಗಳಲ್ಲಿ ಅತ್ಯಂತ ವ್ಯಕ್ತಿ ನಿಷ್ಠತೆ ಹೊಂದಿರುವ ವಿಧಾನವೆಂದರೆ ಅದು ಅಂತರಾವಲೋಕನ.
- ಅವಲೋಕನ ವಿಧಾನ ಎನ್ನುವುದು "ಉದ್ದೇಶ ಸಹಿತವಾಗಿ ನಿರ್ದಿಷ್ಟ ಸಮಯ ಮತ್ತು ಸನ್ನಿವೇಶದಲ್ಲಿ ಪೂರ್ವ ನಿರ್ಧಾರಿತ ಕ್ರಮದಲ್ಲಿ ವ್ಯವಸ್ಥಿತವಾಗಿ ವೀಕ್ಷಿಸಿ, ವೀಕ್ಷಿಸಿದ್ದನ್ನು ದಾಖಲಿಸಿ ನಿರ್ಣಯ ತೆಗೆದುಕೊಳ್ಳುವುದೇ ಅವಲೋಕನ."
- ಅವಲೋಕನ ಪದ್ಧತಿಯ ಜನಕ : ಜೆ. ಬಿ. ವ್ಯಾಟ್ಸನ್.
- ಪ್ರಾಯೋಗಿಕ ವಿಧಾನ : " ಗುರುತಿಸಿದ ಸಮಸ್ಯೆಯೊಂದರ ಬಗ್ಗೆ ಮಾಡಿದ ಪ್ರಾಕಲ್ಪನೆಯ ಸತ್ಯಾಸತ್ಯತೆ ಅಥವಾ ನಿಖರತೆಯನ್ನು ನಿರ್ಧರಿಸಲು ಅನುಸರಿಸುವ ಮಾರ್ಗವೇ ಪ್ರಯೋಗ."
- ಪ್ರಾಕಲ್ಪನೆ ಎಂದರೆ ಸಮಸ್ಯೆಯೊಂದಕ್ಕೆ ತಾತ್ಕಾಲಿಕವಾಗಿ ಜಾಣ್ಮೆಯಿಂದ ಊಹಿಸಿದ ಪರಿಹಾರವಾಗಿದೆ.
- ಪ್ರಯೋಗ ಪದ್ಧತಿಯ ಹಂತಗಳು :

  1. ಸಮಸ್ಯೆಯನ್ನು ಗುರುತಿಸುವುದು.
  2. ಸೂಕ್ತ ಪ್ರಾಕಲ್ಪನೆಗಳ ರಚನೆ
  3. ಚರಾಂಶಗಳ ಗುರುತಿಸುವಿಕೆ
  4. ಚರಾಂಶಗಳ ವರ್ಗೀಕರಣ
  5. ಚರಾಂಶಗಳ ನಿಯಂತ್ರಣ
  6. ಅವಲಂಬಿತ ಚಲಕ ಮಾಪನ
  7. ಪ್ರಯೋಗ
  8. ತೀರ್ಮಾನ ಕೈಗೊಳ್ಳುವುದು
  9. ವರದಿ ತಯಾರಿಸುವುದು.
  10. ಪುನರಾವರ್ತನೆ

Telegram: https://t.me/edutubekannada

Downloaded from www.edutubekannada.com

- ಪ್ರಯೋಗ ಪದ್ಧತಿಯಲ್ಲಿ ಪ್ರಾಕಲ್ಪನೆಯನ್ನು 'ಪ್ರಯೋಗಕಾರನ ಕಣ್ಣು' ಎಂದು ಕರೆಯಲಾಗುತ್ತದೆ. ( )
- ಚರಾಂಶಗಳ ವರ್ಗೀಕರಣ :
    1. ಸ್ವತಂತ್ರ ಚರಾಂಶ : ಯಾವ ಚರಾಂಶ ತನ್ನ ಪ್ರಭಾವದಿಂದಾಗಿ ಇನ್ನೊಮದು ಚರಾಂಶದ ಮಟ್ಟವನ್ನು ಬದಲು ಮಾಡುವುದೋ ಅದು ಸ್ವತಂತ್ರ ಚರಾಂಶ.
    2. ಅವಲಂಬಿತ ಚರಾಂಶ : ಯಾವ ಚರಾಂಶವು ಬೇರೊಂದು ಚರಾಂಶದ ಪ್ರಭಾವದಿಂದಾಗಿ ತನ್ನ ಮಟ್ಟವನ್ನು ಬದಲಿಸಿಕೊಳ್ಳುವುದೋ ಅದು ಅವಲಂಬಿತ/ಪರತಂತ್ರ ಚರಾಂಶ.
    3. ಮಧ್ಯವರ್ತಿ ಚರಾಂಶ : ಇವುಗಳೂ ಕೂಡ ಸ್ವತಂತ್ರ ಚರಾಂಶದಂತೆ ಇದ್ದರೂ ಪ್ರಯೋಗಕಾರ ಇವುಗಳನ್ನು ಪೂರ್ವಾಲೋಚಿಸಿ ನಿಯಂತ್ರಿಸುತ್ತಾನೆ.
    4. ಅಸಂಗತ ಚರಾಂಶ : ಯಾವ ಚರಾಂಶ ಯಾವ ಚರಾಂಶದ ಮೇಲೂ ಯಾವುದೇ ಪರಿಣಾಮ ಉಂಟುಮಾಡುವುದಿಲ್ಲವೋ ಅದು ಅಸಂಗತ ಚರಾಂಶ.
- ವ್ಯಕ್ತಿ ಅಧ್ಯಯನದ ಪ್ರವರ್ತಕ : ಡಿ. ಎಫ್. ಡಿ. ಬುಕ್ಸ್
- ವ್ಯಕ್ತಿ ಅಧ್ಯಯನವು ಒಂದು ಸಮಸ್ಯೆಗೆ ಸಂಬಂಧಿಸಿದ ವ್ಯಕ್ತಿ ಅಥವಾ ಅನೇಕ ವ್ಯಕ್ತಿಗಳು ಅಥವಾ ಸಂಸ್ಥೆ ಅಥವಾ ಒಂದು ಗ್ರಾಮವನ್ನೂ ಒಳಗೊಂಡಿರಬಹುದು.
- ಹಲವು ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ, ಅದನ್ನು ಅರ್ಥೈಸಿ, ಸಮಸ್ಯೆಯ ಕಾರಣಗಳನ್ನು ವಿಶ್ಲೇಷಿಸಿ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವುದೇ ಆಗಿದೆ.
- ವ್ಯಕ್ತಿ ಅಧ್ಯಯನವನ್ನು ಚಿಕಿತ್ಸಾ ವಿಧಾನ ಅಥವಾ ನೈದಾನಿಕ ವಿಧಾನ ಎಂದೂ ಕರೆಯುತ್ತಾರೆ.
- ವ್ಯಕ್ತಿ ಅಧ್ಯಯನದ ಹಂತಗಳು :
    1. ಸಮಸ್ಯಾತ್ಮಕ ವ್ಯಕ್ತಿ/ಸಂಸ್ಥೆಯ ಆಯ್ಕೆ
    2. ಸಮಸ್ಯೆ ನಿರೂಪಣೆ
    3. ಮಾಹಿತಿ ಸಂಗ್ರಹ
    4. ಮಾಹಿತಿಯ ವ್ಯವಸ್ಥೀಕರಣ.
    5. ಮಾಹಿತಿಗೆ ಅರ್ಥ ಕಲ್ಪಿಸುವುದು.
    6. ಸಮಸ್ಯೆಯ ಕಾರಣಗಳ ವಿಶ್ಲೇಷಣೆ
    7. ಸೂಕ್ತ ನಿವಾರಣೋಪಾಯಗಳ ನಿರ್ಧಾರ.
    8. ನಿವಾರಣೋಪಾಯಗಳನ್ನು ಕಾರ್ಯಗತಗೊಳಿಸುವುದು
    9. ನಿವಾರಣೋಪಾಯಗಳ ಮೌಲ್ಯನಿರ್ಧಾರ.
- ಮನೋವಿಶ್ಲೇಷಣಾ ವಿಧಾನ - ಸಿಗ್ಮಂಡ್ ಫ್ರಾಯ್ಡ್

Telegram: https://t.me/edutubekannada

Downloaded from www.edutubekannada.com

# ಶೈಕ್ಷಣಿಕ ಮನೋವಿಜ್ಞಾನ

- ಶೈಕ್ಷಣಿಕ ಮನೋವಿಜ್ಞಾನವು ಮನೋವಿಜ್ಞಾನದ ಅನ್ವಯಿಕ ಶಾಖೆ.
- ಸ್ಕಿನ್ನರ್ : "ಶೈಕ್ಷಣಿಕ ಮನೋವಿಜ್ಞಾನವು ಬೋಧನೆ & ಕಲಿಕೆಗೆ ಸಂಬಂಧಿಸಿದೆ."
- ಕ್ರೋ ಮತ್ತು ಕ್ರೋ : "ಹುಟ್ಟಿನಿಂದ ಸಾವಿನವರೆಗೆ ವ್ಯಕ್ತಿಯ ಕಲಿಕಾ ಅನುಭವಗಳನ್ನು ವಿವರಿಸುವುದೇ ಶೈಕ್ಷಣಿಕ ಮನೋವಿಜ್ಞಾನ."
- 1910 ರಲ್ಲಿ ಥಾರ್ನ್‌ಡೈಕ್ "ಜರ್ನಲ್ ಆಫ್ ಎಜ್ಯುಕೇಶನಲ್ ಸೈಕಾಲಜಿ" ಎಂಬ ನಿಯತಕಾಲಿಕೆ ಪ್ರಕಟಿಸಿದನು.
- ಥಾರ್ನ್‌ಡೈಕ್ ನನ್ನು ಮೊದಲ ಶೈಕ್ಷಣಿಕ ಮನೋವಿಜ್ಞಾನಿ ಎನ್ನಲಾಗುತ್ತದೆ.
- ಶೈಕ್ಷಣಿಕ ಮನೋವಿಜ್ಞಾನದ ಪ್ರವೇಶದಿಂದಾಗಿ ಕಂಡುಬಂದ ಕ್ರಾಂತಿಕಾರಿ ಮತ್ತು ಮಹತ್ವದ ಬದಲಾವಣೆ ಎಂದರೆ - ಶಿಶು ಕೇಂದ್ರಿತ ಶಿಕ್ಷಣ ಪದ್ಧತಿ.

## ಬೆಳವಣಿಗೆ ಮತ್ತು ವಿಕಾಸ

- ಬೆಳವಣಿಗೆ ಎಂದರೆ : ಯಾವುದೇ ಜೀವಿಯಲ್ಲಾಗುವ ಪರಿಮಾಣಾತ್ಮಕ ಬದಲಾವಣೆ.
- ವಿಕಾಸ ಎಂದರೆ : ಯಾವುದೇ ಜೀವಿಯಲ್ಲಾಗುವ ಗುಣಾತ್ಮಕ & ಪರಿಮಾಣಾತ್ಮಕ ಬೆಳವಣಿಗೆಯೇ ವಿಕಾಸ.
- ವಿಕಾಸವು ಶಿರೋ-ಪಾದಾಭಿಮುಖ (ಸೆಫಲೋ-ಕಾಡೆಲ್) ತತ್ವವನ್ನು ಹೊಂದಿದೆ. ಅಂದರೆ ಬೆಳವಣಿಗೆ & ವಿಕಾಸ ಎರಡೂ ಪ್ರಕ್ರಿಯೆ ತಲೆಯಿಂದ ಆರಂಭವಾಗಿ ಕಾಲಿನ ಬೆರಳುಗಳ ಕಡೆಗೆ ಅನುಕ್ರಮವಾಗಿ ಸಾಗುತ್ತದೆ.
- ಭೌತಿಕವಾಗಿ ಮಗುವು ಮೊದಲು ತನ್ನ ಶಿರ/ತಲೆಯ ನಿಯಂತ್ರಣ ಹೊಂದುತ್ತದೆ.
- ಕೇಂದ್ರ ಪರಿಧಿ ತತ್ವವನ್ನು ಹೊಂದಿದೆ. ಅಂದರೆ ಮೆದುಳು ಬಳ್ಳಿಯ ಸುತ್ತಲಿನಿಂದ ಆರಂಭವಾಗಿ ದೇಹದ ಹೊರ ಭಾಗದ ಕಡೆಗೆ ಸಾಗುತ್ತದೆ.
- ವಿಕಾಸವು ದ್ವಿ ಪಾರ್ಶ್ವದಿಂದ ಏಕಪಾರ್ಶ್ವದೆಡೆಗೆ ಸಾಗುತ್ತದೆ. ಅಂದರೆ ಆರಂಭದಲ್ಲಿ ಮಗುವು ತನ್ನ ಚಲನೆಯಲ್ಲಿ ದೇಹದ ಎರಡೂ ಭಾಗಗಳನ್ನು ಏಕರೂಪದಲ್ಲಿ ಬಳಸುತ್ತದೆ, ಅನಂತರ ನಿರ್ದಿಷ್ಟ ಕಾರ್ಯಕ್ಕೆ ನಿರ್ದಿಷ್ಟ ಅಂಗಗಳನ್ನು ಬಲಸಿಕೊಳ್ಳುತ್ತದೆ.
- ವಿಕಾಸವು ಅನುವಂಶೀಯತೆ ಮತ್ತು ಪರಿಸರಗಳ ಅನ್ಯೋನ್ಯ ಕ್ರಿಯೆಯ ಫಲಿತಾಂಶವಾಗಿದೆ.
- ವಿಕಾಸಾತ್ಮಕ ಕಾರ್ಯಗಳು ಎಂಬ ಪರಿಕಲ್ಪನೆಯನ್ನು ನೀಡಿದವರು : ಅಮೇರಿಕದ ರಾಬರ್ಟ್ ಹ್ಯಾವಿಗ್‌ಹರ್ಸ್ಟ್
- ವಿಕಾಸವಾದದ ಪಿತಾಮಹ ಚಾರ್ಲ್ಸ್ ಡಾರ್ವಿನ್ ಅವರ ಕೃತಿ : ಆರಿಜಿನ್ ಆಫ್ ಸ್ಪೀಸಿಸ್.
- ಪಿಟ್ಯುಟರಿ ಗ್ರಂಥಿಯನ್ನು ಬೆಳವಣಿಗೆಯ ಗ್ರಂಥಿ ಎನ್ನುತ್ತಾರೆ. ಇದರ ಹಾರ್ಮೋನ್ ಸ್ರವಿಕೆ ಹೆಚ್ಚಾದರೆ ದೈತ್ಯಾಕಾರ ದೇಹ ಹೊಂದುತ್ತಾರೆ. ಕಡಿಮೆಯಾದರೆ ಕುಬ್ಜರಾಗುತ್ತಾರೆ.
- ಪಿಟ್ಯುಟರಿ ಗ್ರಂಥಿಯನ್ನು 'ಸರ್ವಗ್ರಂಥಿಗಳ ನಿಯಂತ್ರಕ', 'ಗ್ರಂಥಿಗಳ ರಾಜ' ಎಂದೂ ಸಹ ಕರೆಯುತ್ತಾರೆ.
- ಥೈರಾಯ್ಡ್ ಗ್ರಂಥಿಯು ಥೈರಾಕ್ಸಿನ್ ಹಾರ್ಮೋನ್‌ನ್ನು ಸ್ರವಿಸುತ್ತದೆ.

Telegram: https://t.me/edutubekannada

Downloaded from www.edutubekannada.com

- ಥೈರಾಕ್ಸಿನ್ ಹಾರ್ಮೋನು ಮನೋಸಾಮರ್ಥ್ಯಗಳ ವಿಕಾಸವನ್ನು ನಿಯಂತ್ರಿಸುತ್ತದೆ.
- ಥೈರಾಕ್ಸಿನ್ ಸ್ರವಿಕೆಯಲ್ಲಿನ ವ್ಯತ್ಯಾಸ ಮಗುವಿನ ಬುದ್ಧಿಮಾಂದ್ಯತೆಗೆ ಕಾರಣವಾಗುತ್ತದೆ.
- ಆಡ್ರಿನಲ್ ಗ್ರಂಥಿಯು ಸ್ರವಿಸುವ ಆಡ್ರಿನಾಲಿನ್ & ನಾರ್ ಆಡ್ರಿನಾಲಿನ್ ಹಾರ್ಮೋನುಗಳು ವ್ಯಕ್ತಿಯ ಭಾವನಾತ್ಮಕ ವಿಕಾಸವನ್ನು ಪ್ರಭಾವಿಸುತ್ತವೆ.
- ಪಕ್ವತೆ ಅಥವಾ ಪರಿಪಕ್ವತೆ ಎಂಬ ಎಂಬ ಪದವನ್ನು ದೈಹಿಕ & ಮಾನಸಿಕ ಎರಡೂ ಆಯಾಮಗಳಿಗೆ ಸಂಬಂಧಿಸಿದಂತೆ ಬಳಸಲಾಗುತ್ತದೆ.
- ಅನುವಂಶೀಯವಾಗಿ ಪಡೆದ ಜೈವಿಕ ಅಂಶಗಳು ಕಾಲದೊಂದಿಗೆ ಮಾಗುವಿಕೆಗೊಳಪಟ್ಟು ವ್ಯಕ್ತಿಯ ವರ್ತನಾ ಪರಿವರ್ತನೆಗೆ ಕಾರಣವಾಗುವ ಪ್ರಕ್ರಿಯೆಯೇ ಪಕ್ವತೆ ಅಥವಾ ಪರಿಪಕ್ವತೆ.
- ಕಲಿಕೆ ಮತ್ತು ಪಕ್ವತೆಯ ಒಟ್ಟು ಫಲವೇ ವಿಕಾಸ.
- ಜೀವಿಗಳು ತಮ್ಮದೇ ಆದ ಹಲವು ಗುಣಲಕ್ಷಣಗಳನ್ನು ತಮ್ಮ ಮುಂದಿನ ತಲೆಮಾರಿಗೆ ಜೈವಿಕ ಅಂಶಗಳ ರೂಪದಲ್ಲಿ ವರ್ಗಾಯಿಸುವ ನೈಸರ್ಗಿಕ ಪ್ರಕ್ರಿಯೆಯೇ ಅನುವಂಶೀಯತೆ.
- ಮಾನವನಲ್ಲಿ 23 ಜೊತೆ (ಒಟ್ಟು 46) ವರ್ಣತಂತುಗಳಿವೆ.
- ವರ್ಣತಂತುಗಳ ಮೇಲಿರುವ ಜೀವಿಯ ಮನೋದೈಹಿಕ ಲಕ್ಷಣಗಳಿಗೆ ಕಾರಣವಾಗುವ ವಿಶಿಷ್ಟ ರಾಸಾಯನಿಕ ವಸ್ತುಗಳನ್ನೇ ಜೀನ್ಸ್ ಅಥವಾ ಗುಣಾಣು ಎನ್ನುವರು.
- ಜೀವಿಯ ಅನುವಂಶೀಯತೆಗೆ ಕಾರಣವಾಗುವ ನೈಜ ಅಂಶಗಳೇ ಈ ಜೀನ್ಸ್‌ಗಳು ಅಥವಾ ಗುಣಾಣುಗಳು.
- 1953 ರಲ್ಲಿ ಅಮೇರಿಕದ ಜೇಮ್ಸ್ ವಾಟ್ಸನ್ ಮತ್ತು ಇಂಗ್ಲೆಂಡಿನ ಫ್ರಾನ್ಸಿಸ್ ಕ್ರಿಕ್ ಎಂಬ ಜಯವಿಕ ತಜ್ಞರು ವಂಶವಾಹಕ ಅಣುಗಳಿಂದ ಡಿಎನ್‌ಎ ರಾಸಾಯನಿಕ ರಚನೆಯನ್ನು ಗುರುತಿಸಿ, ತಳಿ ವಿಜ್ಞಾನದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ತಂದರು.
- ಸ್ತ್ರಿಯ ಅಂಡಾಣುವಿನಲ್ಲಿ X ಮತ್ತು X ವರ್ಣತಂತುಗಳಿದ್ದರೆ, ಪುರುಷನಲ್ಲಿ X ಮತ್ತು Y ಎಂಬ ವರ್ಣತಂತುಗಳಿವೆ. ಹೀಗಾಗಿ ಮಗುವಿನ ಲಿಂಗ ನಿರ್ಧಾರವು ತಂದೆಯ ವರ್ಣತಂತುವನ್ನಾಧರಿಸಿದೆ.
- ಭಾತೃ ಅವಳಿಗಳು : ಸ್ತ್ರೀಯ ಅಂಡಾಶಯದಲ್ಲಿ ಒಂದಕ್ಕಿಂತ ಹೆಚ್ಚು ಅಂಡಾಣುಗಳು ಬಿಡುಗಡೆಯಾಗಿ, ಅವುಗಳು ಪ್ರತ್ಯೇಕ ವೀರ್ಯಾಣುಗಳೊಂದಿಗೆ ಫಲಿತಗೊಂಡು, ಪ್ರತ್ಯೇಕ ಭ್ರೂಣಗಳಾಗಿ ಬೆಳೆದು, ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ಮಕ್ಕಳು ಜನಿಸಿದರೆ ಅವುಗಳನ್ನು ಭಾತೃ ಅವಳಿಗಳು ಅಥವಾ ಅಸಮರೂಪಿ ಅವಳಿಗಳು ಎನ್ನುತ್ತೇವೆ. ಇವುಗಳು ಹೆಣ್ಣೂ ಇರಬಹುದು ಅಥವಾ ಗಂಡೂ ಇರಬಹುದು.
- ಸಮರೂಪಿ/ತದ್ರೂಪಿ ಅವಳಿಗಳು : ಅಂಡಾಣು & ವೀರ್ಯಾಣು ಸಮಾಗಮದಿಂದ ಫಲಿತಗೊಂಡ ಯುಗ್ಮಕೋಶವು ಕೋಶವಿಭಜನೆಯ ಸಂದರ್ಭದಲ್ಲಿ ಅನೇಕ ಸಮಾನ ಹೋಳುಗಳಾಗಿ ಸೀಳಲ್ಪಟ್ಟು, ಆ ಪ್ರತಿಯೊಂದು ಹೋಳುಗಳೂ ಪ್ರತ್ಯೇಕ ಭ್ರೂಣಗಳಾಗಿ ಬೆಳೆದು ಒಂದೇ ಕಾಲದಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳು ಜನಿಸಲೂಬಹುದು. ಇವುಗಳನ್ನೇ ಸಮರೂಪಿ/ತದ್ರೂಪಿ ಅವಳಿಗಳೆಂದು ಹೆಸರು. ಇವು ಎಲ್ಲಾ ಹೆಣ್ಣು ಇಲ್ಲವೇ ಎಲ್ಲಾ ಗಂಡಾಗಿರುತ್ತವೆ.
- 10-12 ವರ್ಷದ ಮಗುವಿನ ಬೆಳವಣಿಗೆಯ ಕಾಲವನ್ನು ಯುದ್ಧಪೂರ್ವ ಶಾಂತಿ ಕಾಲ ಎನ್ನುವರು.
- 19-20 ನೇ ವಯಸ್ಸಿಗೆ ವ್ಯಕ್ತಿಯ ಲಂಬ ಬೆಳವಣಿಗೆ ನಿಂತು ಬಿಡುತ್ತದೆ.

Telegram: https://t.me/edutubekannada

Downloaded from www.edutubekannada.com

- ಜೀನ್ ಪಿಯಾಜೆಯವರ ಪ್ರಕಾರ ಸ್ಕೀಮಾ ಎಂದರೆ ವ್ಯಕ್ತಿ ತನ್ನ ಪರಿಸರದಲ್ಲಿನ ವಸ್ತುಗಳೊಂದಿಗೆ ವ್ಯವಹರಿಸುವ ವರ್ತನಾ ವಿನ್ಯಾಸಗಳನ್ನೇ ಸ್ಕೀಮಾ ಅಥವಾ ಜ್ಞಾನಾತ್ಮಕ ಸಂರಚನೆಗಳು ಎಂದಿದ್ದಾರೆ.
- ಜೀನ್ ಪಿಯಾಜೆಯವರ ಜ್ಞಾನಾತ್ಮಕ ವಿಕಾಸ ಸಿದ್ಧಾಂತದ ಹಂತಗಳು
    1. ಸಂವೇದನಾಗತಿ ಹಂತ : ಜನನದಿಂದ 02 ವರ್ಷ
    2. ಕ್ರಿಯಾಪೂರ್ವ ಹಂತ : 02 ರಿಂದ 07 ವರ್ಷ
    3. ಮೂರ್ತಕಾರ್ಯಗಳ ಹಂತ : 07 ರಿಂದ 11 ವರ್ಷ
    4. ಔಪಚಾರಿಕ ಕಾರ್ಯಗಳ ಹಂತ : 11 ವರ್ಷ ಮೇಲ್ಪಟ್ಟು.
- ರಷ್ಯನ್ ಮನೋವಿಜ್ಞಾನಿ ಲೇವ್ ಸಿಮಿನೋವಿಚ್ ವೈಗೋಟ್‌ಸ್ಕಿ ಅವರ ಸಮಾಜೋ-ಸಾಂಸ್ಕೃತಿಕ ಸಿದ್ಧಾಂತ : ಮಗುವಿನ ಜ್ಞಾನಾತ್ಮಕ ವಿಕಾಸದಲ್ಲಿ ಅದರಲ್ಲೂ ವಿಶೇಷವಾಗಿ ಮಗುವಿನ ಭಾಷಾವಿಕಾಸದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರಗಳ ಪ್ರಭಾವವನ್ನು ಒತ್ತಿ ಹೇಳಿದರು.
- ವಿಕಾಸದ ಸಾಮೀಪ್ಯ ವಲಯ (The Zone Of Proximal Development : ZPD) ವೈಗೊಟ್‌ಸ್ಕೀ ಅವರ ಪ್ರಕಾರ ಯಾವುದೇ ವಿಕಾಸದ ಹಂತದಲ್ಲಿದ್ದ ಮಗುವು ಸಮಸ್ಯೆಯೊಂದನ್ನು ಪರಿಹರಿಸುವ ಸಾಮೀಪ್ಯದಲ್ಲಿರುತ್ತದೆ. ಆದರೆ ಅದಕ್ಕೆ ಕೆಲವು ಸೂಚನೆ, ಸುಳಿವು, ವಿವರ, ಅಥವಾ ಹಂತಗಳನ್ನು ನೆನಪು ಮಾಡಿಕೊಳ್ಳಲು ಸಹಾಯ, ಪರಿಹಾರಕ್ಕಾಗಿ ಪ್ರಯತ್ನ ಮುಂದುವರೆಸುವಲ್ಲಿ ಪರಿಮಿತಿಯನ್ನು ಹೊಂದಿರುವುದನ್ನೇ ವಿಕಾಸದ ಸಾಮೀಪ್ಯ ವಲಯ ಎನ್ನುತ್ತೇವೆ.
- ಬ್ರೂನರ್ ಅವರ ಜ್ಞಾನಾತ್ಮಕ ವಿಕಾಸವು ಕ್ರಿಯೆ, ಬಿಂಬ ಮತ್ತು ಪದ ಎಂಬ ಮೂರು ಘಟ್ಟಗಳನ್ನು ಹೊಂದಿದೆ. ಅವುಗಳನ್ನು ಕ್ರಮವಾಗಿ ಕ್ರಿಯಾ ಪ್ರಾತಿನಿಧ್ಯ, ಪ್ರತಿಮಾ ಪ್ರಾತಿನಿಧ್ಯ ಹಾಗೂ ಸಾಂಕೇತಿಕ ಪ್ರಾತಿನಿಧ್ಯ ಎಂಬ ಮೂರು ವಿಧಾಬಗಳಾಗಿ ಗುರುತಿಸಬಹುದು.
- ಬಾಲ್ಯಾವಸ್ಥೆಯಲ್ಲಿ ಮಗುವಿನ ಸಂವೇಗಗಳು ತೀವ್ರವಾಗಿರುತ್ತವೆ.
- ಪ್ರೌಢಾವಸ್ಥೆಯನ್ನು ಭಾವನಾತ್ಮಕ ಪರಿಪಕ್ವತೆಯ ಕಾಲ ಎನ್ನುವರು.
- ಎರಿಕ್ ಎರಿಕ್‌ಸನ್ ಅವರ ಮನೋ-ಸಾಮಾಜಿಕ ಸಿದ್ಧಾಂತ : ಎರಿಕ್‌ಸನ್ ಅವರು ಮಗುವಿನ ವಿಕಾಸ ಕಾರ್ಯದಲ್ಲಿ 8 ಹಂತಗಳನ್ನು ನೀಡಿದ್ದಾರೆ.
    1. ನಂಬಿಕೆ ವಿರುದ್ಧ ಅಪನಂಬಿಕೆ
    2. ಸ್ವಾಯತ್ತತೆ ವಿರುದ್ಧ ನಾಚಿಕೆ & ಸಂಶಯ
    3. ಮುನ್ನುಗ್ಗುವಿಕೆ ವಿರುದ್ಧ ಅಪರಾಧ ಪ್ರಜ್ಞೆ
    4. ಕಾರ್ಯಶೀಲತೆ ವಿರುದ್ಧ ಕೀಳರಿಮೆ
    5. ಅನನ್ಯತೆ ವಿರುದ್ಧ ಪಾತ್ರ ಗೊಂದಲ
    6. ಆಪ್ತತೆ ವಿರುದ್ಧ ಏಕಾಂತತೆ
    7. ಸೃಜನಶೀಲತೆ ವಿರುದ್ಧ ಸ್ಥಗಿತತೆ
    8. ಸಮಗ್ರತೆ ವಿರುದ್ಧ ಹತಾಶೆ

Telegram: https://t.me/edutubekannada

Downloaded from www.edutubekannada.com

- ಲಾರೆನ್ಸ್ ಕೋಹ್ಲಬರ್ಗ್ ಅವರ ನೈತಿಕ ವಿಕಾಸದ ಸಿದ್ಧಾಂತ :
    1. ರೂಢಿ ಪೂರ್ವ ಹಂತ
    2. ರೂಢಿ ಹಂತ
    3. ರೂಢಿಯೋತ್ತರ ಹಂತ
- ಎಲಿಜಬೆತ್ ಹರ್ಲಾಕ್ ಅವರ ಬೆಳವಣಿಗೆ ಮತ್ತು ವಿಕಾಸದ ಹಂತಗಳು
    1. ಪ್ರಸವ ಪೂರ್ವ (ಗರ್ಭದಿಂದ ಜನಿಸುವವರೆಗೆ)
    2. ಶೈಶವ ಹಂತ : ಜನನದಿಂದ 2 ವಾರಗಳ ಅವಧಿ
    3. ಹಸುಳೆತನ : 2 ವಾರಗಳಿಂದ 2 ವರ್ಷದೊಳಗಿನ ಅವಧಿ
    4. ಪೂರ್ವ ಬಾಲ್ಯ : 2 ನೇ ವರ್ಷದ ಕೊನೆಯಿಂದ 6 ವರ್ಷಗಳ ವರೆಗೆ
    5. ಉತ್ತರ ಬಾಲ್ಯ : 6 - 12 ವರ್ಷ
    6. ಕಿಶೋರಾವಸ್ಥೆ : 12- 18 ವರ್ಷ
    7. ವಯಸ್ಕತನ : 14 – 40 ವರ್ಷ
    8. ಮಧ್ಯ ವಯಸ್ಸು : 40 – 60 ವರ್ಷ
    9. ವೃದ್ಧಾಪ್ಯ : 60 ವರ್ಷಗಳ ನಂತರದ ಅವಧಿ
- ಉತ್ತರ ಬಾಲ್ಯಾವಸ್ಥೆಯನ್ನು ಕೂಟಗಳ ಯುಗ (ಗ್ಯಾಂಗ್ ಏಜ್) ಎಂದು ಕರೆಯಲಾಗುತ್ತದೆ.
- ಶ್ರೀಮತಿ ಎಲಿಜಬೆತ್ ಹರ್ಲಾಕ್ ರವರು ಮಗುವಿನ ಸಾಮಾಜಿಕ ವಿಕಾಸದ ಕುರಿತು ವ್ಯಾಪಕ ಅಧ್ಯಯನ ನಡೆಸಿದ್ದಾರೆ.
- ಉತ್ತರ ಬಾಲ್ಯಾವಸ್ಥೆಯಲ್ಲಿ ವೀರ ವ್ಯಕ್ತಿಯ ಆರಾಧನೆ ಕಂಡುಬರುತ್ತದೆ.
- ಬಾಲ್ಯಾವಸ್ಥೆಯಲ್ಲಿ ಬುದ್ಧಿಶಕ್ತಿಯ ಬೆಳವಣಿಗೆಯ ವೇಗವು ಅತ್ಯಧಿಕವಾಗಿರುತ್ತದೆ.
- ಕಿಶೋರಾವಸ್ಥೆಯನ್ನು ವ್ಯಕ್ತಿಯ ಸಂಕ್ರಮಣ ಕಾಲ/ಪರ್ವಕಾಲ ವೆಂದು ಪರಿಭಾವಿಸಲಾಗಿದೆ.

## ಬುದ್ಧಿಶಕ್ತಿ

- **ಟರ್ಮನ್** : "ವ್ಯಕ್ತಿಯ ಅಮೂರ್ತ ಆಲೋಚನಾ ಸಾಮರ್ಥ್ಯವೇ ಬುದ್ಧಿಶಕ್ತಿ."
- **ಬುಟಿಂಗ್ ಹ್ಯಾಮ್** : "ವ್ಯಕ್ತಿಯೊಬ್ಬನಿಗೆ ತನ್ನಲ್ಲಿರುವ ಕಲಿಯುವ ಸಾಮರ್ಥ್ಯವೇ ಬುದ್ಧಿಶಕ್ತಿ."
- **ಸಿರಿಲ್ ಬರ್ಟ್** : "ವ್ಯಕ್ತಿ ಪಡೆದಿರುವ ಸ್ವಾಭಾವಿಕ ಜ್ಞಾನ ಸಾಮರ್ಥ್ಯವೇ ಬುದ್ಧಿಶಕ್ತಿ."
- ಬುದ್ಧಿಶಕ್ತಿಯು ಒಂದು ಜ್ಞಾನಾತ್ಮಕ ಹಾಗೂ ಆಲೋಚನಾ ಸಾಮರ್ಥ್ಯವಾಗಿದೆ.
- ಬುದ್ಧಿಶಕ್ತಿಯು ಪರಿಸರ ಮತ್ತು ಅನುವಂಶೀಯತೆಯ ಅನ್ಯೋನ್ಯ ಕ್ರಿಯೆಯ ಫಲಿತವಾಗಿದೆ.
- ಒಂದು ಜನಸಮೂಹದ ಬುದ್ಧಿಶಕ್ತಿಯನ್ನು ಮಾಪನ ಮಾಡಿ, ಬುದ್ಧಿಶಕ್ತಿಯ ಹಂಚಿಕೆಯನ್ನು ನಕ್ಷೆಯ ಮೂಲಕ ಪ್ರಸ್ತುತಪಡಿಸಿದರೆ ಆ ನಕ್ಷೆಯನ್ನು ಸಾಮಾನ್ಯ ಸಂಭಾವ್ಯತಾ ವಕ್ರ ಎಂದು ಕರೆಯುತ್ತೇವೆ.

Telegram: https://t.me/edutubekannada

Downloaded from www.edutubekannada.com

- ಸಾಮಾನ್ಯ ಸಂಭಾವ್ಯತಾ ವಕ್ರವು ಘಂಟಾಕಾರ ಆಗಿರತ್ತದೆ.
- ಟರ್ಮನ್ ಅವರ ಪ್ರಕಾರ ಬಾಲ್ಯಾವಸ್ಥೆಯಲ್ಲಿ ಬುದ್ಧಿಶಕ್ತಿಯ ಬೆಳವಣಿಗೆಯ ವೇಗವು ಅತ್ಯಧಿಕವಾಗಿರುತ್ತದೆ.
- ಸಾಮಾನ್ಯವಾಗಿ 16 - 18 ನೇ ವಯಸ್ಸಿನಲ್ಲಿ ಬುದ್ಧಿಶಕ್ತಿಯ ಲಂಬ ಬೆಳವಣಿಗೆ ನಿಲುಗಡೆಷ ಹೊಂದುತ್ತದೆ.
- ಬುದ್ಧಿಶಕ್ತಿಯಲ್ಲಿ 1) ಅಮೂರ್ತ ಬುದ್ಧಿಶಕ್ತಿ 2) ಸಾಮಾಜಿಕ ಬುದ್ಧಿಶಕ್ತಿ 3) ಸ್ನಾಯು/ಯಾಂತ್ರಿಕ ಬುದ್ಧಿಶಕ್ತಿ ಎಂಬ ವಿಧಗಳಿವೆ.
- ಫ್ರಾನ್ಸ್‌ನ ಮನೋವಿಜ್ಞಾನಿಯಾದ ಆಲ್ಫ್ರೆಡ್ ಬೀನೆಯವರು ಮಾನಸಿಕ ವಯಸ್ಸಿನ ಪರಿಕಲ್ಪನೆಯನ್ನು ನೀಡಿದರು.
- ವಿಲಿಯಂ ಸ್ಟರ್ನ್ ಎಂಬ ಮನೋವಿಜ್ಞಾನಿ ಬುದ್ಧಿಶಕ್ತಿ ಸೂಚ್ಯಂಕದ ಪರಿಕಲ್ಪನೆ ನೀಡಿದರು.
- ಬುದ್ಧಿಶಕ್ತಿಯನ್ನು = ಮಾನಸಿಕ ವಯಸ್ಸು/ದೈಹಿಕ ವಯಸ್ಸು X100 . ಸೂತ್ರದ ಸಹಾಯದಿಂದ ಕಂಡುಹಿಡಿಯಲಾಗುತ್ತದೆ.
- ಜಗತ್ತಿನ ಮೊದಲ ಬುದ್ಧಿಶಕ್ತಿ ಪರೀಕ್ಷೆಯನ್ನು ಮೊದಲು ರಚಿಸಿದವರು ಆಲ್ಫ್ರೆಡ್ ಬೀನೆ ಮತ್ತು ಥಿಯೋಡರ್ ಸೈಮನ್ (1905 ರಲ್ಲಿ) ಆದ್ದರಿಂದ ಆಲ್ಫ್ರೆಡ್ ಬೀನೆ ಅವರನ್ನು ಬುದ್ಧಿಶಕ್ತಿ ಪರೀಕ್ಷೆಗಳ ಜನಕ ಎನ್ನಲಾಗುತ್ತದೆ.
- ಶಾಬ್ದಿಕ ವೈಯಕ್ತಿಕ ಪರೀಕ್ಷೆಗಳು : ಬೀನೆ ಸೈಮನ್ ಪರೀಕ್ಷೆ, ಸ್ಟಾನ್‌ಫೋರ್ಡ್ ಬೀನೆ ಪರೀಕ್ಷೆ, ಬೀನೆ ಕಾಮತ್ ಪರೀಕ್ಷೆ.
- ಅಶಾಬ್ದಿಕ ವೈಯಕ್ತಿಕ ಪರೀಕ್ಷೆಗಳು : ಭಾಟಿಯಾ ಕಾರ್ಯನಿರ್ವಹಣಾ ಪರೀಕ್ಷೆ, ಕೋಹ್ ಬ್ಲಾಕ್ ಡಿಸೈನ್ ಪರೀಕ್ಷೆ.
- ಶಾಬ್ದಿಕ ಸಾಮೂಹಿಕ ಪರೀಕ್ಷೆ : ಶೈಕ್ಷಣಿಕ ಅಭಿಕ್ಷಮತಾ ಪರೀಕ್ಷೆ, ದಿ ಮದ್ರಾಸ್ ಸಾಮಾನ್ಯ ಬುದ್ಧಿಶಕ್ತಿ ಪರೀಕ್ಷೆ. ಆರ್ಮಿ ಆಲ್ಫಾ ಪರೀಕ್ಷೆ.
- ಅಶಾಬ್ದಿಕ ಸಾಮೂಹಿಕ ಪರೀಕ್ಷೆ : ರೇವನ್‌ನ ಪ್ರಗತಿಶೀಲ ಮಾತೃಕೆಗಳ ಪರೀಕ್ಷೆ, ಆರ್ಮಿ ಬೀಟಾ ಪರೀಕ್ಷೆ.
- ಬುದ್ಧಿಶಕ್ತಿಯ ಸಿದ್ಧಾಂತಗಳು :
  1) ಆಲ್‌ಫ್ರೆಡ್ ಬಿನೆಯವರ – ಏಕಾಂಶವಾದ ಸಿದ್ಧಾಂತ
  2) ಚಾರ್ಲ್ಸ್ ಸ್ಪಿಯರ್‌ಮನ್ – ದ್ವಿ ಅಂಶವಾದ ಸಿದ್ಧಾಂತ (G-ಸಾಮಾನ್ಯ ಅಂಶ, S-ನಿರ್ದಿಷ್ಟ ಅಂಶ)
  3) ಜೆ. ಪಿ. ಗಿಲ್ಫರ್ಡ್ – ಮೂರು ಆಯಾಮದ ಸಿದ್ಧಾಂತ (ಕ್ರಿಯ, ವಸ್ತು, ಉತ್ಪನ್ನ)
  4) ರಾಬರ್ಟ್ ಸ್ಟರ್ನ್‌ಬರ್ಗ್ – ಟ್ರೈರಾರ್ಕಿ/ತ್ರಿಮುಖ ಸಿದ್ಧಾಂತ (ಪ್ರಾಯೋಗಿಕ ಬುದ್ಧಿಶಕ್ತಿ, ಘಟಕ ಬುದ್ಧಿಶಕ್ತಿ ಮತ್ತು ಸಂದರ್ಭೋಚಿತ ಬುದ್ಧಿಶಕ್ತಿ)
  5) ಥಾರ್ನ್‌ಡೈಕ್ ಅವರ – ಬಹುಕಾರಕ ಸಿದ್ಧಾಂತ (Multi factor Theory)
  6) ಲೂಯಿಸ್ ಥರ್ಸ್ಟನ್ – ಸಮೂಹಕಾರಕ ಸಿದ್ಧಾಂತ (7 ಸಮೂಹಗಳು)
  7) ಬರ್ಟ್ ರವರ – ಹೈರಾರ್ಕಿ ಸಿದ್ಧಾಂತ
  8) ಹಾವರ್ಡ್ ಗಾರ್ಡನರ್ – ಬಹು ಬುದ್ಧಿಶಕ್ತಿಯ ಸಿದ್ಧಾಂತ (8 ವಿಧದ ಬುದ್ಧಿಶಕ್ತಿ)
- ಸಂವೇಗಾತ್ಮಕ ಬುದ್ಧಿಶಕ್ತಿ –(Emotional Intelligence) ಎಂಬ ಪರಿಕಲ್ಪನೆಯನ್ನು ಮೊದಲು ಪರಿಚಯಿಸಿದವರು ಜಾನ್ ಮೇಯರ್ & ಪೀಟರ್ ಸಾಲೋವೈ ರವರು (1990)
- ಡೇನಿಯಲ್ ಗೋಲ್ಮನ್ ರವರು 1995 ರಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿ ಎಂಬ ಗ್ರಂಥವನ್ನು ಪ್ರಕಟಿಸುವ ಮೂಲಕ ಅದನ್ನು ಹೆಚ್ಚು ಪ್ರಚಾರಗೊಳಿಸಿದರು.
- ಭಾರತದಲ್ಲಿ ಎ. ಕೆ. ಚಾಂದ್ ಅವರ ಸಂವೇಗಾತ್ಮಕ ಬುದ್ಧಿಶಕ್ತಿ ಪರೀಕ್ಷೆಗಳನ್ನು ಬಳಸಲಾಗುತ್ತದೆ.

Telegram: https://t.me/edutubekannada

Downloaded from www.edutubekannada.com

# ಕಲಿಕೆ

- ಗೇಟ್ಸ್ : ಅನುಭವದ ಮೂಲಕ ವರ್ತನೆಯಲ್ಲಾಗುವ ಬದಲಾವಣೆಯನ್ನೇ ಕಲಿಕೆ ಎನ್ನುವರು.
- ಥಾರ್ನ್‌ಡೈಕ್ : ಪ್ರಚೋದನೆ & ಪ್ರತಿಕ್ರಿಯೆಗಳ ನಡುವೆ ಏರ್ಪಡುವ ಬಂಧವೇ ಕಲಿಕೆ.
- ವುಡ್‌ವರ್ತ್ : ವ್ಯಕ್ತಿಯ ವರ್ತನೆಗಳಲ್ಲಿ ಬದಲಾವಣೆ ತರುವ ಅನುಭವಾತ್ಮಕ ಚಟುವಟಿಕೆಗಳೇ ಕಲಿಕೆ.
- ಕಲಿಕೆಯ ಬಂಧವಾದ ಸಿದ್ಧಾಂತ/ಸಹಚರ್ಯ ಸಿದ್ಧಾಂತಗಳು :
  1. ವರ್ತನಾವಾದ : ಜೆ. ಬಿ. ವ್ಯಾಟ್ಸನ್
  2. ಬಂಧವಾದ : ಥಾರ್ನ್‌ಡೈಕ್
  3. ಅನುಬಂಧವಾದ : ಪಾವ್‌ಲೋವ್
  4. ಕ್ರಿಯಾ ಪ್ರಸೂತ ಅನುಬಂಧವಾದ : ಬಿ. ಎಫ್. ಸ್ಕಿನ್ನರ್
  5. ಬೋಧನಾ ಶಮನ ಸಿದ್ಧಾಂತ : ಹಲ್
  6. ಸಾಮೀಪ್ಯ ಕಲಿಕೆ ಸಿದ್ಧಾಂತ : ಗತ್ರಿ
- ಸಂಜ್ಞಾನಾತ್ಮಕ ಕ್ಷೇತ್ರ ಸಿದ್ಧಾಂತಗಳು :
  1. ಗೆಸ್ಟಾಲ್ಟ್ ಸಿದ್ಧಾಂತ : ಕೋಹ್ಲರ್, ವರ್ಥಮೀರ್, ಕರ್ಟ್ ಲೆವಿನ್
  2. ಸಂಕೇತ ಗೆಸ್ಟಾಲ್ಟ್ : ಟೋಲ್‌ಮನ್
  3. ಕ್ಷೇತ್ರ ಸಿದ್ಧಾಂತ : ಲೆವಿನ್
- ಸಂಜ್ಞಾನಾತ್ಮಕ ಬೋಧನಾ ಸಿದ್ಧಾಂತ :
  1. ಅರ್ಥಪೂರ್ಣ ಸ್ವೀಕೃತಿ ಕಲಿಕೆ : ಆಸುಬೆಲ್
  2. ಅನ್ವೇಷಣಾ ಕಲಿಕೆ : ಬ್ರೂನರ್
  3. ಕಲಿಕಾ ಶ್ರೇಣಿ : ರಾಬರ್ಟ್ ಎಂ ಗ್ಯಾಗ್ನೆ
  4. ಜ್ಞಾನಾತ್ಮಕ ಕಲಿಕೆ : ಜೀನ್ ಪಿಯಾಜೆ
  5. ಪ್ರಭುತ್ವ ಕಲಿಕೆ : ಬೆಂಜಮಿನ್ ಎಸ್ ಬ್ಲೂಮ್
- ಸಾಮಾಜಿಕ ಕಲಿಕಾ ಸಿದ್ಧಾಂತ : ವೀಕ್ಷಣಾ ಕಲಿಕೆ : ಬಂಡೂರ
- ಮಾನವತಾ ಸಿದ್ಧಾಂತ : ಅಬ್ರಹಾಂ ಮಾಸ್ಲೋ
- ಪ್ರಯತ್ನ-ದೋಷ ಕಲಿಕೆಯ ಪ್ರಯೋಗದ ನಿಯಮಗಳು :
  1. ಸಿದ್ಧತಾ ನಿಯಮ
  2. ಅಭ್ಯಾಸ ನಿಯಮ
  3. ಪರಿಣಾಮ ನಿಯಮ
- ಶಾಸ್ತ್ರೀಯ ಅನುಬಂಧವಾದ ಕಲಿಕೆಯ ಪ್ರತಿಪಾದಕ : ಪೆಟ್ರೋವಿಚ್ ಪಾವ್‌ಲೋವ್
- ಕ್ರಿಯಾಜನ್ಯ ಅನುಬಂಧವಾದ : ಬಿ. ಎಫ್. ಸ್ಕಿನ್ನರ್

www.edutubekannada.com

Telegram: https://t.me/edutubekannada

Downloaded from www.edutubekannada.com

# ಟಿಇಟಿ-2022 ವಿಶೇಷ

## ಶೈಕ್ಷಣಿಕ ಮನೋವಿಜ್ಞಾನದ ಸೂಪರ್ ಮಾಹಿತಿ ಭಾಗ-2

## Edutube Kannada Exclusive Notes

**ಮುಂಬರುವ ಟಿಇಟಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳು ಶೈಕ್ಷಣಿಕ ಮನೋವಿಜ್ಞಾನಕ್ಕೆ ಸಂಬಂಧಪಟ್ಟಂತೆ ಇಷ್ಟು ಓದಿಕೊಂಡ್ರೆ ಸಾಕು..!!**

**(ಭಾಗ–1 ರಿಂದ ಮುಂದುವರೆದಿದೆ)**

ಹಿಂದಿನ ವೀಡಿಯೋದಲ್ಲಿ ನಾವು :


1. ಮನೋವಿಜ್ಞಾನ & ಶೈಕ್ಷಣಿಕ ಮನೋವಿಜ್ಞಾನ
2. ಬೆಳವಣಿಗೆ ಮತ್ತು ವಿಕಾಸ
3. ಬುದ್ಧಿಶಕ್ತಿ
4. ಕಲಿಕೆ

## ಕಲಿಕೆ


- **ಕಲಿಕಾ ವಕ್ರ :** ಕಲಿಕೆಯ ದರವನ್ನು ನಕ್ಷೆಯ ಮೂಲಕ ನಿರೂಪಿಸುವುದನ್ನೇ ಕಲಿಕಾ ವಕ್ರ ಎನ್ನುತ್ತೇವೆ.

- **ಕಲಿಕಾ ವಕ್ರದಲ್ಲಿನ ಪ್ರಕಾರಗಳು :**


1. **ಋಣಾತ್ಮಕ ಕಲಿಕಾ ವಕ್ರ :** ಆರಂಭದಲ್ಲಿ ಕಲಿಕೆಯ ಪ್ರಮಾಣವು ಹೆಚ್ಚಿದ್ದು, ಕ್ರಮೇಣ ಕಲಿಕೆಯ ಪ್ರಮಾಣ ಕಡಿಮೆಯಾಗುವುದನ್ನು ನಕ್ಷೆಯ ಮೂಲಕ ನಿರೂಪಿಸುವ ವಕ್ರವೇ ಋಣಾತ್ಮಕ ಕಲಿಕಾ ವಕ್ರ.





2. **ಧನಾತ್ಮಕ ಕಲಿಕಾ ವಕ್ರ :** ಕಲಿಕೆಯು ಆರಂಭದಲ್ಲಿ ಕಡಿಮೆ, ಕ್ರಮೇಣ ಕಾಲದೊಂದಿಗೆ ಕಲಿಕೆಯ ದರ ಹೆಚ್ಚಾಗುವ ಪ್ರಮಾಣವನ್ನು ಸೂಚಿಸುವ ವಕ್ರವೇ ಧನಾತ್ಮಕ ಕಲಿಕಾ ವಕ್ರ.




3. **ಮಿಶ್ರ ಕಲಿಕಾ ವಕ್ರ :** ಕಲಿಕೆಯು S ಆಕಾರದಲ್ಲಿದ್ದು ಕಾಲದೊಂದಿಗೆ ಹೆಚ್ಚು ಕಡಿಮೆ ಆಗುತ್ತಾ ಸಾಗುವುದನ್ನು ನಕ್ಷೆಯ ಮೂಲಕ ನಿರೂಪಿಸುವುದೇ ಮಿಶ್ರ ಕಲಿಕಾ ವಕ್ರ.




4. **ಶೂನ್ಯ ಕಲಿಕಾ ವಕ್ರ :** ಕಲಿಕೆಯು ಒಂದು ನಿರ್ದಿಷ್ಟ ಸಮಯದವರೆಗೆ ಮುಂದುವರೆದು ನಂತರ ಸ್ಥಗಿತಗೊಳ್ಳುತ್ತದೆ. ಇದನ್ನು ನಕ್ಷೆಯ ಮೂಲಕ ನಿರೂಪಿಸಿದರೆ ಅದನ್ನು ಶೂನ್ಯ ಕಲಿಕಾ ವಕ್ರ ಎನ್ನುವರು.




Telegram: https://t.me/edutubekannada

Downloaded from www.edutubekannada.com

**ಕಲಿಕಾ ವರ್ಗಾವಣೆ :** ಒಂದು ಸನ್ನಿವೇಶದಲ್ಲಿ ಪಡೆದಿರುವ ಜ್ಞಾನ, ತರಬೇತಿ, ಹಾಗೂ ಅಭ್ಯಾಸಗಳನ್ನು ಇನ್ನೊಂದು ಕ್ಷೇತ್ರದಲ್ಲಿ ಅನ್ವಯ ಮಾಡಿಕೊಳ್ಳುವುದನ್ನೇ ಕಲಿಕೆಯ ವರ್ಗಾವಣೆ ಎನ್ನಲಾಗುತ್ತದೆ.

**ಕಲಿಕಾ ವರ್ಗಾವಣೆಯ ವಿಧಗಳು : 3**

1. **ಧನಾತ್ಮಕ ಕಲಿಕಾ ವರ್ಗಾವಣೆ :** ಹಿಂದಿನ ಕಲಿಕೆ ಮುಂದಿನ ಕಲಿಕೆಗೆ ಸಹಾಯಕವಾದರೆ ಅದು ಧನಾತ್ಮಕ ಕಲಿಕಾ ವರ್ಗಾವಣೆ.
2. **ಋಣಾತ್ಮಕ ಕಲಿಕಾ ವರ್ಗಾವಣೆ :** ಹಿಂದಿನ ಕಲಿಕೆ ಮುಂದಿನ ಕಲಿಕೆಗೆ ಅಡ್ಡಿಯಾಗುವುದನ್ನು ಋಣಾತ್ಮಕ ಕಲಿಕಾ ವರ್ಗಾವಣೆ.
3. **ಶೂನ್ಯ ಕಲಿಕಾ ವರ್ಗಾವಣೆ :** ಹಿಂದಿನ ಕಲಿಕೆಯು ಮುಂದಿನ ಕಲಿಕೆಯ ಮೇಲೆ ಯಾವುದೇ ಪರಿಣಾಮ ಉಂಟುಮಾಡದಿದ್ದರೆ ಅದನ್ನು ಶೂನ್ಯ ಕಲಿಕಾ ವರ್ಗಾವಣೆ ಎನ್ನುತ್ತೇವೆ.

**ಕಲಿಕಾ ಶ್ರೇಣಿ : ರಾಬರ್ಟ್ ಗ್ಯಾಗ್ನೆ** ಎಂಬ ಮನೋವಿಜ್ಞಾನಿ ಕಲಿಕಾ ಶ್ರೇಣಿಯ ಬಗ್ಗೆ ವಿವರಿಸುತ್ತಾನೆ.

ರಾಬರ್ಟ್ ಗ್ಯಾಗ್ನೆ 1965 ರಲ್ಲಿ ತಮ್ಮ **'ಕಂಡಿಷನ್ಸ್ ಆಫ್ ಲರ್ನಿಂಗ್'** ಎಂಬ ಪುಸ್ತಕದಲ್ಲಿ **'ಸಂಚಯಿತ ಕಲಿಕಾ ಮಾದರಿ'** ಎಂದು ಕರೆಯುವ ಕಲಿಕಾ ಶ್ರೇಣಿಯನ್ನು ಆರಂಭದಲ್ಲಿ 8 ಹಂತದ ಕಲಿಕೆಯನ್ನು ಗುರುತಿಸಿದ್ದಾರೆ. ನಂತರ 8 ಹಂತಗಳನ್ನು ಪರಿಷ್ಕರಿಸಿ, 4 ಹಂತಗಳನ್ನು ಕಲಿಕಾ ಶ್ರೇಣಿಯಲ್ಲಿ ಗುರುತಿಸಿದ್ದಾರೆ.

**ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು :**

1. **ಅಭಿಪ್ರೇರಣೆ :** ಮೋಟಿವೇಷನ್ ಎಂಬ ಪದವು ಲ್ಯಾಟಿನ್ ಪದವಾದ ಮೂವ್ ಎಂಬ ಪದದಿಂದ ಬಂದಿದ್ದು, ಇದರ ಅರ್ಥ ಚಲಿಸುವಂತೆ ಮಾಡು, ಚೇತನಗೊಳಿಸು ಎಂದರ್ಥ.
   - ವ್ಯಕ್ತಿಯನ್ನು ನಿರ್ದಿಷ್ಟ ಗುರಿಯೆಡೆಗೆ ಪ್ರಚೋದಿಸುವ ಶಕ್ತಿಯೇ ಅಭಿಪ್ರೇರಣೆ.
   - ಇದರಲ್ಲಿ ಆಂತರಿಕ ಅಭಿಪ್ರೇರಣೆ ಮತ್ತು ಬಾಹ್ಯ ಅಭಿಪ್ರೇರಣೆ ಎಂಬ ಪ್ರಕಾಗಳಿವೆ.
2. **ಆಸಕ್ತಿ :** ಆಸಕ್ತಿ ಎಂಬ ಪದವು ಇಂಗ್ಲೀಷ್ ನ ಇಂಟರೆಸ್ಟ್ ಎಂಬ ಪದದ ಸಂವಾದಿಯಾಗಿದ್ದು, ಲ್ಯಾಟೀನ್ ಭಾಷೆಯಲ್ಲಿ ಮಹತ್ವದ್ದು ಎಂಬ ಅರ್ಥ ಹೊಂದಿದೆ.
   - ಚಟುವಟಿಕೆಯೊಂದರ ಕಡಗೆ ಗಮನ ಹರಿಸುವಂತೆ ಮಾಡುವ ಪ್ರೇರಕ ಶಕ್ತಿಯೇ ಆಸಕ್ತಿ.
3. **ಅವಧಾನ :** ಇರುವ ಹಲವು ವಸ್ತುಗಳಲ್ಲಿ ಒಂದೇ ವಸ್ತುವಿನ ಮೇಲೆ ಪ್ರಜ್ಞೆಯನ್ನು ಕೇಂದ್ರೀಕರಿಸುವುದೇ ಅವಧಾನ. ಅವಧಾನದಲ್ಲಿ ಐಚ್ಛಿಕ ಅವಧಾನ & ಅನೈಚ್ಛಿಕ ಅವಧಾನ ಎಂಬ ವಿಧಗಳಿವೆ.
4. **ಸ್ಮೃತಿ :** ಅನುಭವಗಳನ್ನು ಸಂಗ್ರಹಿಸಿಡುವ & ಅವಶ್ಯಕತೆಯಿದ್ದಾಗ ನೆನಪಿಗೆ ತಂದುಕೊಳ್ಳುವುದೇ ಸ್ಮೃತಿ.
5. **ವಿಸ್ಮೃತಿ :** ಕಲಿತಂತಹ ವಿಷಯವನ್ನು ಪುನಃ ಸ್ಮರಣೆಗೆ ತಂದುಕೊಳ್ಳುವಲ್ಲಿ ವಿಫಲನಾಗುವುದೇ ವಿಸ್ಮೃತಿ.

Telegram: https://t.me/edutubekannada

Downloaded from www.edutubekannada.com

## ಕಲಿಕಾ ನ್ಯೂನ್ಯತೆಗಳು :

1. ಡಿಸ್‌ಲೆಕ್ಸಿಯಾ : ಓದುವಿಕೆಗೆ ಸಂಬಂಧಿಸಿದ ಕಲಿಕಾ ನ್ಯೂನ್ಯತೆ
2. ಡಿಸ್‌ಗ್ರಾಫಿಯಾ : ಬರವಣಿಗೆಗೆ ಸಂಬಂಧಿಸಿದ ಕಲಿಕಾ ನ್ಯೂನ್ಯತೆ.
3. ಡಿಸ್‌ಕ್ಯಾಲ್ಕುಲಿಯಾ : ಗಣಿತ ಸಂಬಂಧಿ ಅಸಮರ್ಥತೆ.
4. ಡಿಸ್‌ಫೋನಿಯಾ : ಧ್ವನ್ಯಾಂಗಗಳ ದೋಷದಿಂದ ಮಾತನಾಡುವುದರಲ್ಲಿನ ನ್ಯೂನ್ಯತೆ.

***

# ವ್ಯಕ್ತಿತ್ವ

- ವ್ಯಕ್ತಿತ್ವ ಎಂಬ ಪದವು Personality ಎಂಬ ಇಂಗ್ಲೀಷ್ ಪದದ ಕನ್ನಡ ರೂಪವಾಗಿದೆ. Personality ಎಂಬ ಪದವು ಲ್ಯಾಟಿನ್ ಭಾಷೆಯ 'Persona' ಎಂಬ ಪದದಿಂದ ಬಂದಿದೆ. 'Persona' ಎಂದರೆ 'ಮುಸುಕು' ಅಥವಾ 'ಮುಖವಾಡ.'
- ಐಸೆಂಕ್ : "ಮನಸ್ಸು, ಬುದ್ಧಿ, ದೈಹಿಕ ರಚನೆ, ನಡೆ ನುಡಿಯಂತಹ ಹೊಂದಾಣಿಕೆ ಹಾಗೂ ಸ್ಥಿರ ವಿಶಿಷ್ಟ ಗುಣಗಳ ಸಂಘಟನೆಯೇ ವ್ಯಕ್ತಿತ್ವ."
- ವುಡ್‌ವರ್ಥ್ : "ಒಬ್ಬ ವ್ಯಕ್ತಿಯ ವರ್ತನೆಯ ಗುಣಮಟ್ಟದ ಒಟ್ಟು ಮೊತ್ತವೇ ವ್ಯಕ್ತಿತ್ವ."
- ಗಿಲ್‌ಫರ್ಡ್ : "ವ್ಯಕ್ತಿಯಲ್ಲಿರುವ ವಿಶೇಷ ಗುಣಲಕ್ಷಣಗಳ ಸ್ವರೂಪವೇ ವ್ಯಕ್ತಿತ್ವ."
- ಕ್ರೆಶ್ಮರ್ ವ್ಯಕ್ತಿತ್ವದ ವರ್ಗೀಕರಣ :
  1. ದುಂಡು ದೇಹ
  2. ನೀಳ ದೇಹ
  3. ದೃಢ ದೇಹ
  4. ವಿರೂಪ ದೇಹ
- ಹಿಪ್ಪೋಕ್ರೆಟಿಸ್ ನ ವ್ಯಕ್ತಿತ್ವದ ವರ್ಗೀಕರಣ :
  1. ಫ್ಲಿಗ್ಮ್ಯಾಟಿಕ್ : ಅತ್ಯಂತ ನಿಧಾನ, ದುರ್ಬಲರು, ಉದ್ರೇಕ ರಹಿತ ಗುಣ.
  2. ಮೆಲಂಕೊಲಿಕ್ : ಕ್ರಿಯಾಶೀಲರು.
  3. ಕೊಲೆರಿಕ್ : ಶೀಘ್ರಕೋಪಿಗಳು
  4. ಸಂಗಾಯಿನ್ : ಅತಿ ಚುರುಕು, ಅಸ್ಥಿರತೆ.
- ಕಾರ್ಲ್‌ಯೂಂಗ್ ನ ವ್ಯಕ್ತಿತ್ವದ ವರ್ಗೀಕರಣ : ಅಂತರ್‌ಮುಖಿ & ಬಹಿರ್‌ಮುಖಿ
- ಗಾರ್ಡನ್ ಆಲ್ಪೋರ್ಟ್ ನ ಸ್ಥಿರಗುಣವಾದ : ಸ್ಥಿರ ಗುಣಗಳ ಬಗ್ಗೆ ಮೊಟ್ಟ ಮೊದಲು ಅಧ್ಯಯನ ಮಾಡಿದವರೆಂದರೆ ಗಾರ್ಡನ್ ಆಲ್ಪೋರ್ಟ್.


Telegram: https://t.me/edutubekannada

Downloaded from www.edutubekannada.com

- ಹುಟ್ಟಿನಿಂದ ವ್ಯಕ್ತಿಯಲ್ಲಿ ಬೆಳೆದು ಬಂದ ಗುಣಗಳು ಯಾವ ಪ್ರಭಾವಗಳಿಂದಲೂ ಮೂಲ ಗುಣ ಸ್ವಭಾವಗಳಲ್ಲಿ ಬದಲಾವಣೆ ಅಥವಾ ಸುಧಾರಣೆ ಆಗದೆ ಮೂಲ ಸ್ವರೂಪವನ್ನು ಉಳಿಸಿಕೊಂಡು ಬಂದಲ್ಲಿ ಅಂತವುಗಳನ್ನು **ಸ್ಥಿರ ಗುಣಗಳು** ಎನ್ನಬಹುದು.
- **ಹಾನ್ಸ್ ಐಸೆಂಕ್** ರವರ : ವ್ಯಕ್ತಿತ್ವ ಸ್ಥಿರಗುಣವಾದ : 1) ಅಂತರ್‌ಮುಖಿಗಳು, 2) ಬಹಿರ್‌ಮುಖಿಗಳು, 3) ಮನೋಬೇನೆಯುಳ್ಳವರು.
- ಸಿಗ್ಮಂಡ್ ಫ್ರಾಯ್ಡ್ ವರನ್ನು **ಮನೋವಿಶ್ಲೇಷಣಾ ಸಿದ್ಧಾಂತದ ಪ್ರತಿಪಾದಕರು** ಎನ್ನಲಾಗುತ್ತದೆ.
- ಸಿಗ್ಮಂಡ್ ಫ್ರಾಯ್ಡ್ ಅವರ ಪ್ರಕಾರ ವ್ಯಕ್ತಿತ್ವದ ಘಟಕಗಳು

1. ಇದ್ (ಇದಂ) : ಇದು ವೈಯಕ್ತಿಕ & ವ್ಯಕಿನಿಷ್ಠವಾಗಿದ್ದು, ನೈಜತೆಯನ್ನು ಹೊಂದದೇ **ಸುಖಾಪೇಕ್ಷೆ, ಸಂತೋಷದ ತತ್ವದ** ಆಧಾರದ ಮೇಲೆ ಕ್ರಿಯಾಶೀಲವಾಗಿರುತ್ತದೆ.
2. ಇಗೋ (ಅಹಂ) : ಇದು ಎರಡನೇ ವ್ಯವಸ್ಥೆಯಾಗಿದ್ದು, **ಸಾಮಾಜಿಕ** ಸ್ವರೂಪವನ್ನು ಹೊಂದಿದೆ. ಅವಿವೇಕತನದಿಂದ ವರ್ತಿಸುವ ಇದ್ ಗೆ ಬುದ್ಧಿಹೇಳಿ, ಇದ್‌ನ ಬಯಕೆ ಈಡೇರಿಸುವಲ್ಲಿ ಸಹಾಯ ಮಾಡುತ್ತದೆ.
3. ಸೂಪರ್ ಇಗೋ (ಅತ್ಯಹಂ) : ಇದು ಉತ್ತಮ ವ್ಯಕ್ತಿತ್ವ ನಿರ್ಮಾಣದ ಅತೀ ಮಹತ್ವದ ವ್ಯವಸ್ಥೆಯಾಗಿದೆ. ಇದ್ ಮತ್ತು ಇಗೋ ಗೆ ಸೂಕ್ತ ಮಾರ್ಗದರ್ಶನ ಮಾಡಿ, ನಿಯಂತ್ರಿಸುತ್ತದೆ.
4. **ಒಟ್ಟಾರೆ ಇದ್ ಸುಖ ಬಯಸಿದರೆ, ಇಗೋ ನೈತಿಕತೆಯನ್ನು ಪರೀಕ್ಷಿಸುತ್ತದೆ ಹಾಗೂ ಸೂಪರ್ ಇಗೋ ಪರಿಪೂರ್ಣತೆಯನ್ನು ಸಾಧಿಸುತ್ತದೆ.**

## ವ್ಯಕ್ತಿತ್ವದ ಮಾಪನಗಳು




Telegram: https://t.me/edutubekannada

Downloaded from www.edutubekannada.com

- **ವ್ಯಕ್ತಿತ್ವ ತಪಶೀಲ ಪಟ್ಟಿಗಳು** : ಇವು ವ್ಯಕ್ತಿಯೊಬ್ಬನ ಸ್ವತಃ ಇಲ್ಲವೇ ಬೇರೆಯವರ ವ್ಯಕ್ತಿತ್ವ ಮಾಪನ ಮಾಡಬಹುದಾದ ಸಾಧನಗಳು.
- **ಮಿನ್ನಿಸೋಟಾ ಬಹುಮುಖ ವ್ಯಕ್ತಿತ್ವ ತಪಶೀಲು ಪಟ್ಟಿ–1** : ಇವುಗಳನ್ನು ಮನೋರೋಗಿಗಳು & ಖಿನ್ನತೆ ಹೊಂದಿದವರ ಬಗ್ಗೆ ಅಧ್ಯಯನ ಮಾಡಲು 1943 ರಲ್ಲಿ ಹಾಥ್‌ವೇ ಮತ್ತು ಮಾರ್ಕಕೆನ್ಲಿ ಎಂಬುವವರು ರೂಪಿಸಿದರು.
- ಐಸೆಂಕ್ ರವರ ವ್ಯಕ್ತಿತ್ವ ತಪಶೀಲು ಪಟ್ಟಿ : 57 ಹೇಳಿಕೆಗಳನ್ನು ಹೊಂದಿದೆ.
- ದರ್ಜಾ ಮಾಪಕಗಳು : **ರೇಟಿಂಗ್ ಸ್ಕೇಲ್** : ಯಾವುದೇ ವ್ಯಕ್ತಿಯ ಭಾವನೆಗಳನ್ನು ನಿರ್ದಿಷ್ಟ ಅಭಿಪ್ರಾಯದ ಮೂಲಕ ವಸುನಿಷ್ಠವಾಗಿ ಮಾಪನ ಮಾಡಬಹುದಾದ ಸಾಧನವೇ ದರ್ಜಾಮಾಪನ.
- ಪ್ರಕ್ಷೇಪಣಾ ವಿಧಾನ : ವ್ಯಕ್ತಿತ್ವದ ಸುಪ್ತ ಚೇತನಗಳನ್ನು ಮಾಪನ ಮಾಡುವ ಪ್ರಕ್ಷೇಪಣ ವಿಧಾನವನ್ನು 1939 ರಲ್ಲಿ **ಲಾರೆನ್ಸ್ ಫ್ರಾಂಕ್** ರವರು ಪ್ರತಿಪಾದಿಸಿದರು.
- **ರೋರ್ಷಾಕ್ ರವರ ಇಂಕ್ ಬ್ಲಾಟ್ ಪರೀಕ್ಷೆ** : ಸ್ವಿಸ್ ಮನೋವೈದ್ಯರಾದ ಹರ್ಮನ್ ರೋರ್ಷಾಕ್ ರವರು 1924 ರಲ್ಲಿ ಇದನ್ನು ರೂಪಿಸಿದ್ದಾರೆ.
- **ಥಿಮ್ಯಾಟಿಕ್ ಅನುಬೋಧೆ ಪರೀಕ್ಷೆ (TAT)**: ವಯಸ್ಕರ ಸಂವೇಗಾತ್ಮಕ ಸಮಸ್ಯೆಗಳನ್ನು ಮೌಲ್ಯಮಾಪನ ಮಾಡಲು ಇದು ಸೂಕ್ತವಾಗಿದೆ. ಇದನ್ನು ಹಾರ್ವರ್ಡ್ ವಿವಿಯ ಪ್ರೊಫೆಸರ್ ಆಗಿದ್ದ **ಹೆನಿ ಮುರ್ರೆ & ಕ್ರಿಸ್ಟಿನಾ ಮಾರ್ಗನ್** 1938 ರಲ್ಲಿ ರೂಪಿಸಿದ್ದಾರೆ.

## ದ್ವಂದ್ವ ಅಥವಾ ಘರ್ಷಣೆಗಳು :

1. ಆಗಮ–ಆಗಮ ದ್ವಂದ್ವ : ವ್ಯಕ್ತಿಗೆ ಎರಡೂ ಬೇಕು, ಆದರೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು.
   ಉದಾ : ಪ್ರೀತಿಸಿದ ಹುಡುಗಿ ಮತ್ತು ಹೆತ್ತ ತಂದೆ ತಾಯಿ.
2. ಅಪಗಮ – ಅಪಗಮ ದ್ವಂದ್ವ : ಎರಡೂ ಬೇಡ, ಒಂದನ್ನು ಕಡ್ಡಾಯವಾಗಿ ಆಯ್ಕೆ ಮಾಡಿಕೊಳ್ಳಬೇಕು.
   ಉದಾ : ಅನಾರೋಗ್ಯದ ವ್ಯಕ್ತಿಗೆ ಇಂಜಕ್ಷನ್ನೂ ಬೇಡ, ಮಾತ್ರೆಯೂ ಬೇಡ. ಆದರೆ ಒಂದನ್ನು ಅನಿವಾರ್ಯವಾಗಿ ಕಡ್ಡಾಯವಾಗಿ ತೆಗೆದುಕೊಳ್ಳಲೇಬೆಕು.
3. ಆಗಮ – ಅಪಗಮ ದ್ವಂದ್ವ : ಒಂದು ಬೇಕು, ಮತ್ತೊಂದು ಬೇಡ. ಆದರ ಎರಡನ್ನೂ ಆಯ್ಕೆ ಮಾಡಿಕೊಳ್ಳಬೇಕು.
   ಉದಾ : ಅಧಿಕಾರಿಗೆ ಲಂಚವ ತೆಗೆದುಕೊಳ್ಳಲು ಇಷ್ಟ, ಆದರೆ ಸಿಕ್ಕ ಬಿದ್ದರೆ ಅನ್ನುವ ಭಯ.
4. ಆಗಮ – ಅಪಗಮದ್ವಯ ದ್ವಂದ್ವ : ಎರಡು ಗುರಿ ಅಥವಾ ಆಯ್ಕೆಗಳಲ್ಲಿ ಒಂದು ಬೇಕು, ಇನ್ನೊಂದು ಬೇಡ. ಈ ಎರಡೂ ಅಂಶಗಳು ಒಂದರಲ್ಲೇ ಇರುತ್ತವೆ.
   ಉದಾ : ಮದುವೆಯಾಗಿ ಅಮೇರಿಕಗೆ ಹೋಗಲು ಇಷ್ಟ, ಆದರೆ ಹೆತ್ತ ತಂದೆ ತಾಯಿಯ ಕುಟುಂಬದ ಎಲ್ಲರನ್ನೂ ಬಿಟ್ಟು ಹೋಗಬೇಕು.

Telegram: https://t.me/edutubekannada

Downloaded from www.edutubekannada.com

## ರಕ್ಷಣಾ ತಂತ್ರಗಳು :

- ವ್ಯಕ್ತಿಯು ತನ್ನ ಅಭಿಪ್ರೇರಣೆಯನ್ನು ತೃಪ್ತಿ ಪಡಿಸಿಕೊಳ್ಳಲು, ತನ್ನ ಆಂತರಿಕ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಇರುವ ಅಭ್ಯಾಸಗಳೇ ರಕ್ಷಣಾ ತಂತ್ರಗಳು.

**ರಕ್ಷಣಾ ತಂತ್ರಗಳು (Defence Machanism)**

**I. ಆಕ್ರಮಣಾ ಆಧಾರಿತ ರಕ್ಷಣಾ ತಂತ್ರ**

1. ಬಲಿಪಶುವಾಗುವಿಕೆ /ಸ್ಥಾನಪಲ್ಲಟ (Displacement)
2. ಸ್ವತಂತ್ರವಾಗಿ ತೋರುತ್ತಿರುವ ಕೋಪ (Free-ploating of anger)
3. ಆತ್ಮನಿಂದೆ (Self Blame)
4. ಹುಚ್ಚು ಆವೇಶ (Madcharge)

**II. ಪಾಲಾಯನ ತತ್ವ ಆಧಾರಿತ ರಕ್ಷಣಾ ತಂತ್ರ**

1. ಅದುಮಿಡುವುದು (Suppression)
2. ಅನೈಚ್ಛಿಕದಮನ (Repression)
3. ಪ್ರತಿಗಮನ/ಹಿಮ್ಮರುಳುವಿಕೆ (Regression)
4. ಹಗಲುಗನಸು / ಭ್ರಮೆ (Day Dream)
5. ತರ್ಕಸಮ್ಮತವಾಗಿಸುವಿಕೆ/ಸುಯುಕ್ತೀಕರಣ (Rationalization)
6. ಸಹಾನುಭೂತಿ (Sympathy)
7. ಗಮನ ಸೆಳೆಯುವಿಕೆ (Attention)
8. ಪ್ರತಿಸ್ಥಾಪನೆ (Replacement)
9. ಏಕಾಂತತೆ (Isolation)
10. ಕನಸುಗಳು (Dreams)
11. ಸನ್ನಿವೇಶ ಪರೀಕ್ಷೆ (Situation test)

**III. ಒಪ್ಪಂದ ತತ್ವ ಆಧಾರಿತ ರಕ್ಷಣಾತಂತ್ರ**

1. ಉದಾತ್ತೀಕರಣ (Submilition)
2. ಪ್ರಕ್ಷೇಪಣೆ (projection)
3. ತಾದಾತ್ಮ ಮನೋಭಾವನೆ (identification)
4. ಪರಿಹಾರ (Compensation)
5. ಶುದ್ಧೀಕರಣ (Purification)

## ಆಕ್ರಮಣ ಆಧಾರಿತ ರಕ್ಷಣಾ ತಂತ್ರಗಳು

- **ಬಲಿಪಶುವಾಗುವಿಕೆ :** ಕೋಪಕ್ಕೆ ಕಾರಣರಾದವರ ಮೇಲೆ ಪ್ರತಿಕಾರ ತೀರಿಸಿಕೊಳ್ಳಲು ಆಗದೇ ಇದ್ದಾಗ ದುರ್ಬಲರ ಮೇಲೆ ಪ್ರತಿಕಾರ ತೀರಿಸಿಕೊಂಡು ತಮ್ಮ ಕೋಪ ಕಡಿಮೆ ಮಾಡಿಕೊಳ್ಳುವುದೇ ಬಲಿಪಶುವಾಗುವಿಕೆ.

  ಉದಾ: ಅಧಿಕಾರಿಯಿಂದ ಬೈಸಿಕೊಂಡ ಶಿಕ್ಷಕ ಮಕ್ಕಳ ಮೇಲೆ ಸಿಟ್ಟು ಮಾಡುವುದು.

- **ಸ್ವತಂತ್ರವಾಗಿ ತೇಲುತ್ತಿರುವ ಕೋಪ:** ವ್ಯಕ್ತಿ ತನಗೆ ಇಷ್ಟವಾಗದ ವ್ಯಕ್ತಿಗಳ ಮೇಲೆ ಕೋಪ ತೀರಿಸಿಕೊಳ್ಳುವ ಬಗೆಯೇ ಸ್ವತಂತ್ರವಾಗಿ ತೇಲುತ್ತಿರುವ ಕೋಪ.

- **ಆತ್ಮನಿಂದೆ :** ವ್ಯಕ್ತಿಯೊಬ್ಬ ಮಾಡುವ ಕೆಲಸದಲ್ಲಿ ಯಶಸ್ಸು ಸಿಗದೇ ಅಪಯಶಸ್ಸು ಗಳಿಸಿದಾಗ ಅದಕ್ಕೆ ತಾನೇ ಹೊಣೆ ಎಂದುಕೊಂಡು ತನ್ನನ್ನೇ ತಾನು ನಿಂದಿಸಿಕೊಳ್ಳುವುದನ್ನು ಆತ್ಮ ನಿಂದನೆ ಎನ್ನುತ್ತೇವೆ.

- **ಹುಚ್ಚು ಆವೇಶ :** ವ್ಯಕ್ತಿಯೊಬ್ಬ ತನಗೆ ಅಡ್ಡಯುಂಟುಮಾಡಿದ ವ್ಯಕ್ತಿ ಅಥವಾ ವಸ್ತುವಿನ ಮೇಲೆ ನೇರ ಆಕ್ರಮಣ ಮಾಡಿ ಪ್ರತಿಕಾರ ತೀರಿಸಿಕೊಳ್ಳುತ್ತೇನೆ ಎಂಬ ಭ್ರಮೆ ಅಥವಾ ಉನ್ಮಾದದ ಮನೋಸ್ಥಿತಿಯೇ ಹುಚ್ಚು ಆವೇಶ.

Telegram: https://t.me/edutubekannada

Downloaded from www.edutubekannada.com

## ಪಲಾಯನ ಆಧಾರಿತ ರಕ್ಷಣಾತಂತ್ರಗಳು

- **ಅದುಮಿಡುವಿಕೆ :** ಹಿತಕರವಲ್ಲದ ಬಯಕೆಗಳನ್ನು, ನೆನಪುಗಳನ್ನು ಸುಪ್ತ ಮನಸ್ಸಿಗೆ ಉದ್ದೇಶಪೂರ್ವಕವಾಗಿ ತಳ್ಳುವ ಕ್ರಿಯೆಯೇ ಅದುಮಿಡುವಿಕೆ.
- **ಅನೈಚ್ಛಿಕ ದಮನ :** ಅಹಿತಕರ ಘಟನೆಗಳನ್ನು ತನಗೆ ಅರಿವಿಲ್ಲದಂತೆ ಸುಪ್ತ ಮನಸ್ಸಿಗೆ ತಳ್ಳುವುದನ್ನು ಅನೈಚ್ಛಿಕ ದಮನ ಎನ್ನುತ್ತೇವೆ.
- **ಹಗಲುಗನಸು ಅಥವಾ ಭ್ರಮೆ :** ವ್ಯಕ್ತಿಯೊಬ್ಬನ ಅತೃಪ್ತ ಅಸಾಧ್ಯ ಕಾಮನೆಗಳನ್ನು ಉದ್ದೇಶಪೂರ್ವಕವಾಗಿ ಜಾಗೃತಾವಸ್ಥೆಗೆ ತಂದು ಭ್ರಮಿಸಿ ತೃಪ್ತಿಪಡುವುದನ್ನೇ ಹಗಲುಗನಸು ಅಥವಾ ಭ್ರಮೆ ಎನ್ನುತ್ತೇವೆ.
- **ಹಿಮ್ಮರಳುವಿಕೆ ಅಥವಾ ಪ್ರತಿಗಮನ :** ವ್ಯಕ್ತಿಯೊಬ್ಬ ಬಾಲ್ಯದ ವರ್ತನೆಯನ್ನು ತೋರುವ ಮೂಲಕ ತನ್ನ ಉದ್ವೇಗಗಳನ್ನು ಕಡಿಮೆ ಮಾಡಿಕೊಳ್ಳುವ ವಿಧಾನವನ್ನು ಹಿಮ್ಮರಳುವಿಕೆ ಅಥವಾ ಪ್ರತಿಗಮನ ಎನ್ನುತ್ತೇವೆ.
- **ತರ್ಕ ಸಮ್ಮತವಾಗಿಸುವಿಕೆ ಅಥವಾ ಸುಯುಕ್ತೀಕರಣ :** ವ್ಯಕ್ತಿಯೊಬ್ಬನ ಆತ್ಮಾಭಿಮಾನಕ್ಕೆ ಧಕ್ಕೆ ಬಂದಾಗ ಅವನು ನ್ಯಾಯ ಸಮ್ಮತವಾದ ಕಾರಣಗಳನ್ನು ನೀಡಿ, ನೈಜ ಕಾರಣಗಳನ್ನು ಮರೆಮಾಚಿ, ತಾನು ಮುಜುಗರದಿಂದ ಪಾರಾಗುವ ತಂತ್ರವೇ ತರ್ಕಸಮ್ಮತವಾಗಿಸುವಿಕೆ.

  ಉದಾ : ಪರೀಕ್ಷೆಯಲ್ಲಿ ಫೇಲಾದ ವಿದ್ಯಾರ್ಥಿಯೊಬ್ಬ ಶಿಕ್ಷಕರು ಸರಿಯಾಗಿ ಪಾಠ ಮಾಡಿಲ್ಲ, ಪ್ರಶ್ನೆಗಳು ಪಠ್ಯಕ್ರಮದಿಂದ ಹೊರತಾಗಿದ್ದವು ಎನ್ನುವುದು.
- **ಪ್ರತಿಸ್ಥಾಪನೆ :** ವ್ಯಕ್ತಿಯೊಬ್ಬನ ಕೆಲಸದಲ್ಲಿ ಅಡೆತಡೆ ಉಂಟಾದಾಗ ಯಶಸ್ಸು ಸಿಗದೇ ಇದ್ದಾಗ ಮೂಲ ಗುರಿಯನ್ನು ಬದಲಿಸಿ ಯಶಸ್ಸುಗಳಿಸುವ ತಂತ್ರವೇ ಪ್ರತಿಸ್ಥಾಪನೆ.

  ಉದಾ: ಇಂಗ್ಲೀಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಆಸೆ ಇರುವವ ಅದನ್ನು ಓದಲು ವಿಫಲನಾದಾಗ ಸೋತಾಗ ಬೇರೊಂದು ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆಯುವುದು.
- **ಗಮನಸೆಳೆಯುವಿಕೆ :** ಅಂತರಂಗದಲ್ಲಿರುವ ಭಾವನೆ, ಆಸೆ, ಆಕಾಂಕ್ಷೆಗಳನ್ನು ಬೇರೊಂದು ಮಾರ್ಗದ ಮೂಲಕ ಸಮಾಜ ಗಮನ ಸೆಳೆಯುವಂತೆ ಮಾಡಿ ತೃಪ್ತಿಪಟ್ಟುಕೊಳ್ಳುವುದೇ ಗಮನ ಸೆಳೆಯುವಿಕೆ.

  ಉದಾ : ಉತ್ತರ ಗೊತ್ತಿಲ್ಲದ ವಿದ್ಯಾರ್ಥಿಯೊಬ್ಬ ಉತ್ತರ ಗೊತ್ತಿದೆ ಎಂಬಂತೆ ವರ್ತಿಸಿ ಶಿಕ್ಷಕರ ಗಮನ ಸೆಳೆಯುವುದು.

## ಒಪ್ಪಂದ ಆಧಾರಿತ ರಕ್ಷಣಾತಂತ್ರಗಳು

- **ಉದಾತ್ತೀಕರಣ :** ಸಮಾಜ ಒಪ್ಪುವ ರೀತಿಯಲ್ಲಿ ಕೆಲಸ ಮಾಡಿ ತೃಪ್ತಿಪಟ್ಟಟುಕೊಳ್ಳುವುದೇ ಉದಾತ್ತೀಕರಣ.
- **ಪ್ರಕ್ಷೇಪಣೆ :** ತನ್ನ ತಪ್ಪನ್ನು ಮರೆಮಾಚಲು ಬೇರೆಯವರನ್ನು ಆರೋಪಿಸಿ ತೃಪ್ತಿ ಪಡುವ ತಂತ್ರವೇ ಪ್ರಕ್ಷೇಪಣೆ.

  ಉದಾ: ಪರೀಕ್ಷೆಯಲ್ಲಿ ಕಾಪಿ ಮಾಡುವಾಗ ಸಿಕ್ಕಿ ಹಾಕಿಕೊಂಡ ವಿದ್ಯಾರ್ಥಿ ನಾನೊಬ್ಬನೇ ತಪ್ಪು ಮಾಡಿಲ್ಲ, ಬೇರೆಯವರೂ ಸಹ ಕಾಪಿ ಮಾಡುತ್ತಾರೆ ಎಂದು ದೂಷಿಸಿ ಸಮಾಧಾನ ಪಟ್ಟುಕೊಳ್ಳುವುದು.

Telegram: https://t.me/edutubekannada

Downloaded from www.edutubekannada.com

- **ತಾದ್ಯಾತ್ಮ ಮನೋಭಾವನೆ :** ಸಮಾಜದಲ್ಲಿನ ಉತ್ತಮ ವ್ಯಕ್ತಿಗಳೊಂದಿಗೆ ಗುರುತಿಸಿಕೊಂಡು ತಾನು ತೃಪ್ತಿಪಟ್ಟುಕೊಳ್ಳುವುದು.
  ಉದಾ : ಉನ್ನತ ಅಧಿಕಾರಿಯೊಬ್ಬನ ಪರಿಚಯವಿಲ್ಲದಿದ್ದರೂ ಸಿಕ್ಕ ಸಿಕ್ಕ ಸಂದರ್ಭದಲ್ಲಿ ಅವರ ಹೆಸರನ್ನು ಹೇಳಿ ನಮ್ಮವರು ಎಂದು ಹೇಳಿ ಖುಷಿಪಡುವುದು.
- **ಪರಿಹಾರ :** ಒಂದು ಕ್ಷೇತ್ರದಲ್ಲಿ ಅಪಯಶಸ್ಸು ದೊರೆತರೆ ಇನ್ನೊಂದು ಕ್ಷೇತ್ರದಲ್ಲಿ ಸಾಧನೆ ಮಾಡಿ, ಮನೋನೆಮ್ಮದಿ ಪಡೆದುಕೊಳ್ಳುವುದು.

*****************************************************************************************

## ಮಾರ್ಗದರ್ಶನ

- ಬಿ. ಎಫ್. ಸ್ಕಿನ್ನರ್ : ವ್ಯಕ್ತಿಯೊಬ್ಬನು ತನ್ನೊಂದಿಗೆ, ಇತರರೊಂದಿಗೆ ಮತ್ತು ಸನ್ನಿವೇಶಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕಲಿಯಲು ಸಹಾಯ ನೀಡು ಪ್ರಕ್ರಿಯೆಯೇ ಮಾರ್ಗದರ್ಶನ.
- **ಸಲಹೆ** : ಮ್ಯಾಕ್ ಡ್ಯೂಗಲ್ : "ತರ್ಕಬದ್ಧವಾಗಿ ಒಪ್ಪಿಕೊಳ್ಳುವಂತೆ ಕೊಡುವ ಸೂಚಚನೆಯೇ ಸಲಹೆ."
- **ಸಲಹೆಯ ವಿಧಗಳು** : 1) ನಿರ್ದೇಶಿತ ಸಲಹೆ, 2) ಅನಿರ್ದೇಶಿತ ಸಲಹೆ.
- **ನಿರ್ದೇಶಿ ಸಲಹೆ** : ಇಲ್ಲಿ ಸಮಸ್ಯಗೆ ಸಲಹೆ ನೀಡುವ ವ್ಯಕ್ತಿಯೇ ಕೇಂದ್ರಬಿಂದು. ಇಲ್ಲಿ ಸಮಸ್ಯೆ ಮುಖ್ಯವೇ ಹೊರು ವ್ಯಕ್ತಿಯಲ್ಲ.
- **ಅನಿರ್ದೇಶಿತ ಸಲಹೆ** : ಇಲ್ಲಿ ಸಮಸ್ಯೆಗೆ ಹೆಚ್ಚು ಪ್ರಾಧಾನ್ಯತೆ ನೀಡದೇ ವ್ಯಕ್ತಿಗೆ ಪ್ರಾಧಾನ್ಯತೆ ನೀಡಲಾಗುತ್ತದೆ.

*****************************************************************************************

## ಸಮೂಹಗತಿ ಶಾಸ್ತ್ರ

- **ಸಮೂಹಗತಿ ಶಾಸ್ತ್ರವೆಂದರೆ :** ಒಂದು ಸಾಮಾಜಿಕ ಗುಂಪು ಅಥವಾ ಗುಂಪುಗಳ ನಡುವಿನ ವರ್ತನೆಯನ್ನು ಮನೋವೈಜ್ಞಾನಿಕವಾಗಿ ಅಧ್ಯಯನ ಮಾಡುವುದೇ ಆಗಿದೆ.
- **ಕರ್ಟ್‌ಲೆವಿನ್** ಎಂಬ ಸಾಮಾಜಿಕ ಮನೋವಿಜ್ಞಾನಿಯು **"ಸಮೂಹಗತಿ ಶಾಸ್ತ್ರ"**ದ ಸಮೂಹಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವವುದುರ ಮೂಲಕ ಬಹುಮುಖ್ಯವಾದ ಕೊಡುಗೆ ನೀಡಿದ್ದಾರೆ.
- **ಸಮೂಹ :** ಒಂದು ಸಾಮಾನ್ಯ ಗುರಿ ಉದ್ದೇಶದ ಸಾಧನೆಗಾಗಿ, ಪರಸ್ಪರ ಅನುಕ್ರಿಯೆಯಲ್ಲಿ ತೊಡಗಿರುವ ಹಲವಾರು ವ್ಯಕ್ತಿಗಳನ್ನು ಸಮೂಹ ಎನ್ನುತ್ತೇವೆ.
- **ಗುಂಪು :** ಎರಡಕ್ಕಿಂತ ಹೆಚ್ಚಿರುವ ಜನರನ್ನು ಗುಂಪು ಎನ್ನುತ್ತೇವೆ.
- **ನಾಯಕತ್ವ :** ಕ್ರೆಚ್ & ಕ್ರೆಚ್ ಫೀಲ್ಡ್ : "ಸಮೂಹ ಒಂದರ ಇತರ ವ್ಯಕ್ತಿಗಳ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವೇ ನಾಯಕತ್ವ."

Telegram: https://t.me/edutubekannada

Downloaded from www.edutubekannada.com

- ಕರ್ಟ್ ಲೆವಿನ್ ಅವರ ಪ್ರಕಾರ ನಾಯಕತ್ವದ ಪ್ರಕಾರಗಳು :
    1. ಸರ್ವಾಧಿಕಾರಿ ನಾಯಕತ್ವ
    2. ಪ್ರಜಾಸತ್ತಾತ್ಮಕ ನಾಯಕತ್ವ
    3. ತಟಸ್ಥ ನಾಯಕತ್ವ
- ಸಮಾಜಮಿತಿ ತಂತ್ರ : ಮಾನವನ ವರ್ತನೆಯನ್ನು ಅರ್ಥ ಮಾಡಿಕೊಳ್ಳುವುದೇ ಸಮಾಜಮಾಪಕದ ತತ್ವವಾಗಿದೆ.
- 1934 ರಲ್ಲಿ ಜೆ. ಎಲ್. ಮೊರೆನೋ ಎಂಬುವವರು ಸಮೂಹದ ಸಂರಚನೆಯನ್ನು ಮೊಟ್ಟಮೊದಲು ಅಧ್ಯಯನ ಮಾಡುವ ತಂತ್ರವನ್ನು ರೂಪಿಸಿದರು.
- ಸಮಾಜಮಿತಿ ತಂತ್ರವು ಸಮೂಹದ ಸದಸ್ಯರ ನಡುವಿನ ಅನ್ಯೋನ್ಯತೆ, ಒಲವು, ಆಂತರಿಕ ಸಂರಚನೆ, ಸ್ವರೂಪಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ.
- ಒಂದು ಸಮೂಹದ ಸದಸ್ಯರು ಪರಸ್ಪರ ಹೊಂದಿರುವ ಒಲವು–ತಿರಸ್ಕಾರ, ಜನಪ್ರಿಯತೆ, ಅಥವಾ ಇತರ ಸದಸ್ಯರಿಂದ ಎಷ್ಟರ ಮಟ್ಟಿಗೆ ಸ್ವೀಕರಿಸಲ್ಪಟ್ಟಿದ್ದಾನೆಂದು ಅಳತೆ ಮಾಡುವುದೇ ಸಮಾಜಮಿತಿ ತಂತ್ರ.
- ಸಮಾಜ ಆಲೇಖ : ಒಂದು ಗುಂಪಿನಲ್ಲಿರುವ ಪಾರಸ್ಪರಿಕ ಸಾಮಾಜಿಕ ಆದ್ಯತೆಗಳ ಚಿತ್ರಾತ್ಮಕ ಪ್ರತಿನಿಧೀಕರಣವೇ ಸಮಾಜ ಆಲೇಖ. ಇದರಿಂದ ಒಂದು ಸಮೂಹದ ರಚನೆಯನ್ನು ತಿಳಿಯಬಹುದಾಗಿದೆ.
- ಒಂದು ಸಮೂಹದ ವ್ಯಕ್ತಿಗಳ ಸಂಬಂಧವನ್ನು ನಕ್ಷೆಯ ಮೂಲಕ ರಚಿಸುವುದನ್ನೇ ಸಮಾಜಮಿತಿ ಆಲೇಖ ಎನ್ನುವರು.

*******************************************************************************************

## ಅಪವಾದಾತ್ಮಕ/ಅಸಾಧಾರಣ ಮಕ್ಕಳು

- ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ವರ್ಗೀಕರಣ : 25 – 75 ರವರೆಗಿನ ಬುದ್ಧಿಶಕ್ತಿ ಹೊಂದಿದವರು
    1. ಆಶ್ರಿತ ಮಾನಸಿಕ ನ್ಯೂನ್ಯತೆಯುಳ್ಳವರು – 25 ಕ್ಕಿಂತ ಕಡಿಮೆ ಬುದ್ಧಿಶಕ್ತಿ ಸೂಚ್ಯಂಕ ಹೊಂದಿದವರು.
    2. ತರಬೇತಿ ಪಡೆಯಬಲ್ಲ ಮಾನಸಿಕ ನ್ಯೂನ್ಯತೆಯುಳ್ಳವರು – 25–50
    3. ಶಿಕ್ಷಣಾರ್ಹ ಮಾನಸಿಕ ನ್ಯೂನತೆಯುಳ್ಳವರು – 50–75
- ಪ್ರತಿಭಾವಂತರು : ಹ್ಯಾವಿಗ್ ಹರ್ಸ್ಟ್ : "ಒಂದು ಉಪಯುಕ್ತ ಕ್ಷೇತ್ರದಲ್ಲಿ ನಿರಂತರವಾಗಿ ವಿಶಿಷ್ಟ ಸಾಧನೆ ತೋರಬಲ್ಲ ವ್ಯಕ್ತಿಯೇ ಪ್ರತಿಭಾವಂತ."
- ಟರ್ಮನ್ & ಮೆರಿಲ್ : ಒಬ್ಬ ವ್ಯಕ್ತಿಯ ಬುದ್ಧಿಲಬ್ಧ 130 ಕ್ಕಿಂತ ಹೆಚ್ಚಿದ್ದು, ಅತೀ ಉನ್ನತತ ಮಟ್ಟದ ಜ್ಞಾನಾತ್ಮಕ ಕಾರ್ಯನಿರ್ವಹಣಾ ಸಾಮರ್ಥ್ಯ ಇರುತ್ತದೆಯೋ ಆ ವ್ಯಕ್ತಿಯೇ ಪ್ರತಿಭಾವಂತ.
- ಪ್ರತಿಭಾವಂತರಿಗೆ ಸಂಪದ್ಭರಿತ ಕಾರ್ಯಕ್ರಮಗಳನ್ನು ಏರ್ಪಡಿಸುವುದು & ವೇಗವರ್ಧನ ವಿಧಾನ ಬಳಸಬೇಕು.
- ಸೃಜನಶೀಲತೆ : ಸ್ಟರ್ನ್ ಮತ್ತು ಕರೋವಿಸ್ಕಿ : "ಪೂರ್ಣ ಇಲ್ಲವೇ ಭಾಗಶಃ ಸ್ವಂತಿಕೆಯುಳ್ಳ ಉತ್ಪಾದನೆಯೇ ಸೃಜನಶೀಲತೆ."
- ಜೆ. ಪಿ. ಗಿಲ್‌ಫರ್ಡ್ ಸೃಜನಶೀಲತೆಯನ್ನು ಏಕಾಗ್ರಮುಖಿ ಚಿಂತನೆ & ವಿಭಿನ್ನ ಚಿಂತನೆ ಎಂದು ವಿಭಾಗಿಸಿದ್ದಾರೆ.

Telegram: https://t.me/edutubekannada

Downloaded from www.edutubekannada.com

- ಸೃಜನಶೀಲತೆಯನ್ನು ಹೆಚ್ಚಿಸಲು ಮೆದುಳಿನ ಕಾರ್ಯಪಟುತ್ವಗೊಳಿಸುವಿಕೆ ನಡೆಸಬೇಕು.
- ನಿಧಾನವಾಗಿ ಕಲಿಯುವವರು : ಸಿರಿಲ್ ಬರ್ಟ್ : "ಶಾಲಾ ಹಂತದಲ್ಲಿ ಅವನ ವಯಸ್ಸಿಗೆ ಅನುಗುಣವಾದ ತರಗತಿಗಿಂತ ಕೆಳಗಿನ ತರಗತಿಯ ಕೆಲಸವನ್ನು ಮಾಡಲಾಗದವರೇ ಕಲಿಕೆಯಲ್ಲಿ ಹಿಂದುಳಿದವರು ಅಥವಾ ಮಂದಗಾಮಿಗಳು."
- ಇವರು **75 – 90** ಬುದ್ಧಿಶಕ್ತಿ ಸೂಚ್ಯಂಕ ಹೊಂದಿರುತ್ತಾರೆ.
- ಮಂದಗಾಮಿಗಳಿಗೆ ಸ್ಥಿತಿ ಸ್ಥಾಪಕ ಪಠ್ಯಕ್ರಮ ವನ್ನು ರಚಿಸಿ ಬೋಧಿಸಬೇಕು.
- ಅಪೂರ್ಣ ಸಾಧಕರು : ಒಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಸಾಮರ್ಥ್ಯ ಅವನ ಮಾನಸಿಕ ಸಾಮರ್ಥ್ಯಕ್ಕಿಂತ ತುಂಬಾ ಕಡಿಮೆ ಮಟ್ಟದಲ್ಲಿದ್ದರೆ ಅವರನ್ನು ಅಪೂರ್ಣ ಸಾಧಕರು ಎಂದು ಕರೆಯುತ್ತೇವೆ.
- ಕಲಿಕೆಯ ಸವಾಲುಗಳುಳ್ಳವರು : ಕಲಿಕೆಯಲ್ಲಿ ಸೀಮಿತ ಸಾಮರ್ಥ್ಯಗಳುಳ್ಳ ಮಕ್ಕಳೇ ಕಲಿಕೆಯ ಸವಾಲುಗಳುಳ್ಳವರು.

************************************************************************************************

# ಮೌಲ್ಯಮಾಪನ ತಂತ್ರಗಳು

- ಸಂಗತಿಯೊಂದರ ಕುರಿತು ನಿರ್ಧಾರ ತೆಗೆದುಕೊಳ್ಳಲು ಅವಕಾಶ ನೀಡುವ ಪ್ರಕ್ರಿಯೆಯೇ ಮೌಲ್ಯಮಾಪನ.
- ನಿರಂತರ ಮೌಲ್ಯಮಾಪನ : ವಿದ್ಯಾರ್ಥಿಗಳ ಶಾಲೆಯಲ್ಲಿನ ಕಲಿಕಾ ಸಂದರ್ಭಗಳನ್ನು ಹಾಗೂ ಚಟುವಟಿಕೆಗಳನ್ನು ನಿರಂತರವಾಗಿ ಗಮನಿಸಿ, ಮಗುವಿನ ಬೆಳವಣಿಗೆ & ಅಭಿವೃದ್ಧಿಗಳನ್ನು ಪೋಷಿಸುವುದೇ ನಿರಂತರ ಮೌಲ್ಯಮಾಪನ.
- ವ್ಯಾಪಕ ಮೌಲ್ಯಮಾಪನ : ಪಠ್ಯ & ಸಹಪಠ್ಯ ಚಟುವಟಿಕೆಗಳನ್ನು ಒಳಗೊಂಡಂತೆ ಮಗುವಿನ ಎಲ್ಲಾ ವರ್ತನೆಗಳನ್ನು ಪರೀಕ್ಷಿಸುವುದೇ ವ್ಯಾಪಕ ಮೌಲ್ಯಮಾಪನ.
- ರಚನಾತ್ಮಕ ಮೌಲ್ಯಮಾಪನ : ಬೋಧನಾ ಪ್ರಕ್ರಿಯೆ ನಡೆಯುವಾಗಲೇ ಕಲಿಕಾ ಪ್ರಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು ನಡೆಸುವ ಮೌಲ್ಯಮಾಪನವೇ ರಚನಾತ್ಮಕ/ರೂಪಣಾತ್ಮಕ ಮೌಲ್ಯಮಾಪನ. ಉದಾ : ಘಟಕ ಪರೀಕ್ಷೆ, ಮಾಸಿಕ ಪರೀಕ್ಷೆ ಇತ್ಯಾದಿ.
- ಸಂಕಲನಾತ್ಮಕ ಮೌಲ್ಯಮಾಪನ : ನಿರ್ದಿಷ್ಟ ಬೋಧನಾ ಕಲಿಕಾ ಪ್ರಕ್ರಿಯೆಯ ಅಂತ್ಯದಲ್ಲಿ ಕೈಗೊಳ್ಳುವ ಮೌಲ್ಯಮಾಪನವೇ ಸಂಕಲನಾತ್ಮಕ ಮೌಲ್ಯಮಾಪನ. ಉದಾ : ವಾರ್ಷಿಕ ಪರೀಕ್ಷೆಗಳು.
- ನೈದಾನಿಕ ಪರೀಕ್ಷೆ : ಕಲಿಕಾ ಪ್ರಕ್ರಿಯೆಯ ಹಂತದಲ್ಲಿ ಮಗುವಿಗೆ ಸಮಸ್ಯೆಗಳೆದುರಾದಾಗ ಅಥವಾ ಕಲಿಕೆಯಲ್ಲಿ ಹಿಂದುಳಿದಾಗ ಸಮಸ್ಯೆಯ ಕಾರಣ ತಿಳಿಯಲು ನಡೆಸುವ ಮೌಲ್ಯಮಾಪನವೇ ನೈದಾನಿಕ ಪರೀಕ್ಷೆ.
- ವಿದ್ಯಾರ್ಥಿಗಳ ಬಲ & ನ್ಯೂನ್ಯತೆಗಳನ್ನು ಪತ್ತೆಹಚ್ಚಲು ಬಳಸುವ ಪರೀಕ್ಷೆ : ನೈದಾನಿಕ ಪರೀಕ್ಷೆ.
- ಕ್ರಿಯಾ ಸಂಶೋಧನೆಯ ಜನಕ : ಕರ್ಟ್ ಲೆವಿನ್

Telegram: https://t.me/edutubekannada